ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಹಂಪಿ ಟೈಮ್ಸ್ HAMPI TIMES Kannada Daily
BOOK SPACE
as your requirement
Special Offer Just For You!
Special Discount
And Free Creative
Support
SPECIAL OFFER
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01	ಸಂಚಿಕೆ:232	ನೋಂದಣಿ ನಂ.:KARKAN27911	ವಿಜಯನಗರ	08.02.2024	ಗುರುವಾರ	ಪುಟ:04	ಬೆಲೆ:2
Volume:01	Issue:232	Reg.No:KARKAN27911	VIJAYANAGARA	08.02.2024	Thursday	Page:04	Rs:2

WE ARE OPEN for Every Function
Hall is a Perfect suit for a meeting, Your Son & Daughters marriage, your child's birthday party, wedding reception or a business seminar. This a best party place located in hosapet, Vijayanagara Dist.
V N Royal Garden Function Hall
Behind Meeralam Talkies, Hosapete-583201 Vijayanagara Dist. Contact For Booking: 9980136034, 9880701217

ಟ್ವೀಟ್ X ಟ್ವೀಟ್

ಕರುನಾಡಿಗೆ ಬರಬೇಕಾದ ನ್ಯಾಯಯುತ ಪಾಲಿಗಾಗಿ ಪ್ರತಿಭಟಿಸಿದ ಮಾತ್ರಕ್ಕೆ ನಾವು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಿದ್ದೇವೆ ಎಂದಲ್ಲ. ನಮಗೆ ಅಖಂಡ ಭಾರತದಷ್ಟೇ ಕರ್ನಾಟಕವೂ ಮುಖ್ಯ.
ಇಂದು ಆರಂಭಿಸಿರುವ ಈ ಚಳವಳಿ ನ್ಯಾಯ ಸಿಗುವವರೆಗೆ ನಿರಂತರವಾಗಿರಲಿದೆ.
ಜಯ ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ..

– ಸಿಎಂ ಸಿದ್ದರಾಮಯ್ಯ

ಮೈಕ್ರೋ ನ್ಯೂಸ್

ಫೆ.09 ರಂದು ಡಿಸಿ ನೇತೃತ್ವದಲ್ಲಿ ಜನತಾ ದರ್ಶನ ಕಾರ್ಯಕ್ರಮ

ಹಂಪಿ ಟೈಮ್ಸ್ ಕೊಪ್ಪಳ

ಮುಖ್ಯಮಂತ್ರಿಗಳ ನಿರ್ದೇಶನದಂತೆ ಸಾರ್ವಜನಿಕರ ಅಹವಾಲುಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಆಲಿಸಿ, ಸೂಕ್ತ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರ ನೇತೃತ್ವದಲ್ಲಿ ಫೆಬ್ರವರಿ 09 ರಂದು ಯಲಬುರ್ಗಾ ತಾಲ್ಲೂಕಿನ ಚಿಕ್ಕವಂಕಲಕುಂಟಾ ಗ್ರಾಮದಲ್ಲಿ ಜನತಾ ದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಫೆ.09 ರಂದು ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಚಿಕ್ಕವಂಕಲಕುಂಟಾ ಗ್ರಾಮದ ಮಾರುತೇಶ್ವರ ಸಮುದಾಯ ಭವನದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 05.30 ಗಂಟೆಯವರೆಗೆ ಜನತಾ ದರ್ಶನ ಕಾರ್ಯಕ್ರಮ ನಡೆಯಲಿದೆ.

ಆದ್ದರಿಂದ ಜನತಾ ದರ್ಶನ ಕಾರ್ಯಕ್ರಮಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಿ, ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹಾಗೂ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ e-paper
REACH EVERY WHERE NO BORDER
ADS
9448633038
www.hampitimes.com

Digital PHOTOGRAPHY SERVICE
" CAPTURE YOUR PERFECT MOMENT "
WEDDING SHOOTING
FASHION SHOOTING
EVENT COVERAGE
BOOK NOW
9632121359

ಗುಲಾಬಿ ಆಂದೋಲನ ಜನ ಜಾಗೃತಿ

ಡಿ.ಹೆಚ್.ಓ ಹೇಳಿಕೆ । ತಂಬಾಕು ಸೇವನೆ ಆರೋಗ್ಯ ಹಾಗೂ ಸಮಾಜದ ಅಭಿವೃದ್ಧಿಗೆ ಕಂಟಕ । ಮಾದಕ ಚಟಗಳಿಗೆ ದಾಸರಾದ್ರೆ ಕ್ಯಾನ್ಸರ್ ಆಹ್ವಾನಿಸಿದಂತೆ

ಹಂಪಿ ಟೈಮ್ಸ್ ಹೊಸಪೇಟೆ

ತಂಬಾಕು ಸೇವನೆಯಿಂದ ಸಾರ್ವಜನಿಕರ ಆರೋಗ್ಯ ಹಾಳಾಗುವುದರ ಜೊತೆಗೆ ಸಮಾಜದ ಅಭಿವೃದ್ಧಿಗೆ ಕಂಟಕವಾಗಿ ಪರಿಣಮಿಸಿದೆ ಎಂದು ಡಿಎಚ್ಓ ಶಂಕರ್ ನಾಯ್ಕ್ ಹೇಳಿದರು.

ನಗರದಲ್ಲಿ ಬುಧವಾರ ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಗುಲಾಬಿ ಆಂದೋಲನ ಜನ ಜಾಗೃತಿ ಜಾಥಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಂಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ್ ನಾಯ್ಕ ಚಾಲನೆ ನೀಡಿ ಮಾತನಾಡಿದರು. ಸಮಾಜದ ಸ್ವಾಸ್ಥ ಮತ್ತು ಜನರ ಆರೋಗ್ಯ ಕಾಪಾಡಲು ಸಾರ್ವಜನಿಕರು, ಸಂಘ ಸಂಸ್ಥೆಗಳು, ಆಸಕ್ತರು ಈ ಅಭಿಯಾನದಲ್ಲಿ ಕೈ ಜೋಡಿಸಿ ತಂಬಾಕುರಹಿತ ಸಮಾಜ ನಿರ್ಮಿಸಲು ಸಹಕರಿಸಬೇಕು ಎಂದರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ನಿಯಂತ್ರಣಾಧಿಕರಿ ಡಾ.ಷನ್ಮುಖ ನಾಯ್ಕ ಮಾತನಾಡಿ, ತಂಬಾಕು ಉತ್ಪನ್ನಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಹಿನ್ನಲೆಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟಮಾಡುವ ವರ್ತಕರಿಗೆ ಹಾಗೂ ತಂಬಾಕು ಉತ್ಪನ್ನಗಳನ್ನು ಸೇವನೆ ಮಾಡುವ ವ್ಯಕ್ತಿಗಳಿಗೆ ಗುಲಾಬಿ ಹೂ ನೀಡುವ ಮೂಲಕ ಮನ: ಪರಿವರ್ತನೆಗಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವು ಯಶಸ್ವಿಯಾಗಲು ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನಿತಂತ್ರಣ ತನಿಖಾದಳದ ಅಧಿಕಾರಿಗಳು, ಸಿಗರೇಟು ಮತ್ತು ತಂಬಾಕು ಇತರೆ ಉತ್ಪನ್ನಗಳ ಅಧಿನಿಯಮ–2003ರ ಸೆಕ್ಷನ್–4, 5, 6ಎ, 6ಬಿ, ಮತ್ತು 7ರ ಅಡಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯಚರಣೆ ನಡೆಸಿ, ಈ ಕಾಯ್ದೆ ಅನುಷ್ಠಾನಗೊಳಿಸಲು ಸಹಕರಿಸಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳಾದ ಡಾ.ಜಂಬಯ್ಯ ಸೇರಿದಂತೆ ಜಿಲ್ಲೆಯ ಎಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ತಾಲೂಕು ಆರೋಗ್ಯ

ಅಧಿಕಾರಿಗಳು, ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿಗಳು, ತಂಬಾಕು ನಿಯಂತ್ರಣ ಕೋಶದ ಸಿಬ್ಬಂದಿ, ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಜಾಗೃತಿ ಜಾಥಾ: ಹೊಸಪೇಟೆ ನಗರದ ತಾಯಿ ಮಕ್ಕಳ ಆಸ್ಪತ್ರೆ ಹಾಗೂ ಡಿ.ಹೆಚ್.ಓ ಕಚೇರಿ ಆವರಣದಿಂದ ಆರಂಭಗೊಂಡ ಜಾಗೃತಿ ಜಾಥವು ರಾಮಾ ಟಾಕೀಸ್ ಮಾರ್ಗವಾಗಿ ಅಂಬೇಡ್ಕರ್ ಸರ್ಕಲ್ ವರೆಗೆ ನಡೆಯಿತು. ಜಾಥಾದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು, ನಗರ ಆರೋಗ್ಯ ಕೇಂದ್ರಗಳ ಸಿಬ್ಬಂದಿ ವರ್ಗ ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಸ್ವಯಂ ಜಾಗೃತಿ ಅವಶ್ಯ

ಹಂಪಿ ಟೈಮ್ಸ್ ಕೂಡ್ಲಿಗಿ

ತಂಬಾಕಿನ ಸೇವನೆಯಿಂದ ಹಿಡಿದು ಧೂಮಪಾನ, ಮದ್ಯಪಾನ ಹಾಗೂ ತಪ್ಪು ಆಹಾರಪದ್ಧತಿಗಳು ಕ್ಯಾನ್ಸರ್ ರೋಗಕ್ಕೆ ಕಾರಣ ಎಂದು ತಾಲೂಕು ಸಾರ್ವಜನಿಕ ಆಸ್ಪತ್ರೆ ಮೂಳೆ ತಜ್ಞ ಡಾ.ರವಿ ಕುಮಾರ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ, ತಾಲೂಕು ಆರೋಗ್ಯಧಿಕಾರಿ ಕಚೇರಿ ಹಾಗೂ ಇತರೆ ಇಲಾಖೆಗಳ ವತಿಯಿಂದ ಹಮ್ಮಿಕೊಂಡ ವಿಶ್ವ ಕ್ಯಾನ್ಸರ್ ಸಪ್ತಾಹ ಹಾಗೂ ಗುಲಾಬಿ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದರು. ಕ್ಯಾನ್ಸರ್ ರೋಗ ಹರಡಲು ಎ ಹಾಗೂ ಸಿ ವಿಟಮಿನ್ ಕೊರತೆ, ಆಹಾರದಲ್ಲಿ ಕೃತಕ ರಾಸಾಯನಿಕಗಳ ಹೆಚ್ಚುಹೆಚ್ಚು ಬಳಕೆ, ಬದಲಾದ ಜೀವನಶೈಲಿಯಿಂದ ಹೆಚ್ಚುತ್ತಿರುವ ಬೊಜ್ಜು, ಮತ್ತು ಹೆಚ್ಚಾಗುತ್ತಿರುವ ಹಾರ್ಮೋನು ಅಸಮತೋಲನ, ರಾಸಾಯನಿಕ ಸೌಂದರ್ಯ ವರ್ಧಕಗಳ ಬಳಕೆ ಹಾಗೂ ಸೂರ್ಯನ ಅತಿಯಾದ ಅಲ್ಟ್ರಾವೈಲೆಟ್‌ಕಿರಣಗಳಿಗೆ ಹಾಗೂ ಇತರ ವಿಕಿರಣ ವಸ್ತುಗಳಿಗೆ ತೆರೆದುಕೊಳ್ಳುವುದು ಹೀಗೆ ಕ್ಯಾನ್ಸರ್‌ಗೆ ಹತ್ತು ಹಲವು ಕಾರಣಗಳಿವೆ ಎಂದು ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಯೌವನದ ವ್ಯವಸ್ಥೆಯಲ್ಲಿಯೇ ಯುವಕ, ಯುವತಿಯರು ಧೂಮಪಾನ, ಮದ್ಯಪಾನ ಹಾಗೂ ಮಾದಕ ಚಟಗಳಿಗೆ ದಾಸ ರಾಗಿ ಕ್ಯಾನ್ಸರ್ ರೋಗಕ್ಕೆ ಆಹ್ವಾನ ನೀಡುತ್ತಾರೆ. ಇಲಾಖೆ ಈ ಬಗ್ಗೆ ಅನೇಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡರು ತಡೆಗಟ್ಟುವಲ್ಲಿ ವಿಫಲರಾಗುತ್ತಿದ್ದು, ಇದಕ್ಕೆ ಸರ್ವರ ಸಹಕಾರ ಹಾಗೂ ಸ್ವಯಂ ಜಾಗೃತಿ ಅವಶ್ಯವಾಗಿದೆ ಎಂದರು. ಮಕ್ಕಳ ತಜ್ಞ ಡಾ.ನಿರಂಜನ, ವೈದ್ಯರುಗಳಾದ ಡಾ. ಮನ್ಸುರ್, ಡಾ.ಶಾಲಿನಿ ಆಪ್ತ ಸಮಾಲೋಚಕರಾದ ನಾಗರತ್ನ, ಓಬಣ್ಣ, ಪ್ರಯೋಗಲಾಯದ ತಜ್ಞರಾದ ಸತೀಶ್, ಶೂಷ್ರೂಷಕ ಅಧಿಕಾರಿ ಟಿ.ಗಂಗಮ್ಮ, ಅರುಣಾ, ವಿನಾಯಕ ಸೇರಿದಂತೆ ವಿನಾಯಕ ಪ್ಯಾರ ಮೆಡಿಕಲ್ ಕಾಲೇಜಿನ ವಿಧ್ಯಾರ್ಥಿಗಳು ಜಾಥದಲ್ಲಿ ಭಾಗವಹಿಸಿದ್ದರು. ಕ್ಯಾನ್ಸರ್ ತಡೆಗಟ್ಟುವ ಕುರಿತು ವಿಧ್ಯಾರ್ಥಿಗಳು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಿದರು. ಪಟ್ಟಣದ ಸಾರ್ವಜನಿಕ ಆಸ್ಪತ್ರೆ, ತಾಲೂಕು ಆರೋಗ್ಯಧಿಕಾರಿ ಕಚೇರಿ ಹಾಗೂ ಇತರೆ ಇಲಾಖೆಗಳ ವತಿಯಿಂದ ಹಮ್ಮಿಕೊಂಡ ವಿಶ್ವ ಕ್ಯಾನ್ಸರ್ ಸಪ್ತಾಹ ಹಾಗೂ ಗುಲಾಬಿ ಆಂದೋಲನಕ್ಕೆ ಮೂಳೆ ತಜ್ಞ ಡಾ. ರವಿಕುಮಾರ್ ಚಾಲನೆ ನೀಡಿದರು. ಮಕ್ಕಳ ತಜ್ಞ ಡಾ.ನಿರಂಜನ, ವೈದ್ಯರುಗಳಾದ ಡಾ. ಮನ್ಸುರ್, ಡಾ.ಶಾಲಿನಿ ಆಪ್ತ ಸಮಾಲೋಚಕರಾದ ನಾಗರತ್ನ, ಓಬಣ್ಣ, ಪ್ರಯೋಗಲಾಯದ ತಜ್ಞರಾದ ಸತೀಶ್, ಶೂಷ್ರೂಷಕ ಅಧಿಕಾರಿ ಟಿ.ಗಂಗಮ್ಮ, ಅರುಣಾ ವಿನಾಯಕ ಇದ್ದರು.

ಹಾಲು ಉತ್ಪಾದಕರಿಗೆ ಬಾಕಿ ಹಣ ಕೊಡಿ

716 ಕೋಟಿ ರೂ ಬಾಕಿ । ಜಿಲ್ಲಾ ರೈತ ಮೋರ್ಚ ಅಧ್ಯಕ್ಷ ಬಾಗಳಿ ಕೊಟ್ರೇಶಪ್ಪ ಆಗ್ರಹ ಬಿಟ್ಟಿ ಭಾಗ್ಯಗಳಿಂದ ಅಭಿವೃದ್ಧಿಗೆ ಕಂಟಕ । ಲೋಕಚುನಾವಣೆಯಲ್ಲಿ ತಕ್ಕಪಾಠ

ಹಂಪಿ ಟೈಮ್ಸ್ ಹರಪನಹಳ್ಳಿ

ಕಳೆದ ಜುಲೈ ತಿಂಗಳಿನಿಂದ ಹಾಲು ಉತ್ಪಾದಕರಿಗೆ ನೀಡಬೇಕಿದ್ದ 716 ಕೋಟಿ ಹಣವನ್ನು ರಾಜ್ಯ ಸರ್ಕಾರ ತಡೆ ಹಿಡಿದಿದ್ದು, ಅದನ್ನು ಕೂಡಲೆ ಬಿಡುಗಡೆಗೊಳಿಸಬೇಕು. ಗೋಹತ್ಯೆ ನಿಷೇದ ಕಾನೂನನ್ನು ತೆಗೆದು ಹಾಕಿ, ರೈತರಿಗೆ ಎತ್ತುಗಳನ್ನು ಕೊಂಡುಕೊಳ್ಳಲಾಗದ ಪರಿಸ್ಥಿತಿ ನಿರ್ಮಿಸಿ ರೈತರಿಗೆ ಅನ್ಯಾಯ ವ್ಯಸಗಿದ್ದಾರೆ ಎಂದು ವಿಜಯನಗರ ಜಿಲ್ಲಾ ರೈತ ಮೋರ್ಚ ಅಧ್ಯಕ್ಷ ಬಾಗಳಿ ಕೊಟ್ರೇಶಪ್ಪ ಆರೋಪಿಸಿದರು.

ಮಂಗಳವಾರ ಪಟ್ಟಣದ ಐ.ಬಿ ಸರ್ಕಲ್ ನಿಂದ ಪ್ರತಿಭಟನೆಯ ಮೂಲಕ ತಾಲ್ಲೂಕು ಆಡಳಿತ ಕಚೇರಿಗೆ ತೆರಳಿ ವಿಜಯನಗರ ಜಿಲ್ಲಾ ರೈತ ಮೋರ್ಚ ಅಧ್ಯಕ್ಷತೆಯಲ್ಲಿ. ಸರ್ಕಾರ ಜನವಿರೋಧಿ ನೀತಿಗಳನ್ನು ಖಂಡಿಸಿ ಹಸುಗಳನ್ನು ಹಿಡಿದುಕೊಂಡು ಪ್ರತಿಭಟನೆ ನಡೆಸಿದರು.

ಹಸುಗಳನ್ನು ಹಿಡಿದುಕೊಂಡು ಗೋಹತ್ಯೆ ನಿಷೇದ ಕಾಯ್ದೆಯನ್ನು ಜಾರಿಗೊಳಿಸಿ ರೈತರಿಗೆ ಅನ್ಯಾಯ ವೆಸಗಿ ವ್ಯವಸಾಯ ಮಾಡಲು ಎತ್ತುಗಳನ್ನು ಕೊಂಡುಕೊಳ್ಳಲು ಪರದಾಡುವಂತೆ ಮಾಡಿ. ಬಿಟ್ಟಿ ಬಾಗ್ಯ ಯೋಜನೆಗಳಿಂದ ಕೇಂದ್ರ ಸರ್ಕಾರ ನೀಡುತ್ತಿದ್ದ ಕಿಸಾನ್ ಸಮ್ಮಾನ್ ಯೋಜನೆ ಸ್ಥಗಿತಗೊಳಿಸಿ. ವಿದ್ಯಾರ್ಥಿಗಳಿಗೆ ಕೊಡುತಿದ್ದ ವಿದ್ಯಾನಿಧಿ ಯೋಜನೆಯನ್ನು ತಡೆಹಿಡಿದು. ಬಿಜೆಪಿ ಸರ್ಕಾರದ ಜನಪರ ಯೋಜನೆಗಳನ್ನು ಸ್ಥಗಿತಗೊಳಿಸಿರಯವ ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸುತ್ತೇವೆ ಎಂದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಾಜಿ ನಿರ್ದೇಶಕ ಆರುಂಡಿ ನಾಗರಾಜ್ ಮಾತನಾಡಿ, ರಾಜ್ಯ ಸರ್ಕಾರ ಹಾಲು ಉತ್ಪಾದಕರ ಪ್ರೋತ್ಸಾಹ ಧನ ತಡೆ ಹಿಡಿದು ರೈತರಿಗೆ ಕೂಡಲೆ ಪೆಟ್ಟನ್ನು ನೀಡಿದೆ. ಅಭಿವೃದ್ಧಿ ಕಾರ್ಯಗಳು ಕುಂಟಿತವಾಗಿದ್ದು ಬಿಟ್ಟಿ ಭಾಗ್ಯಗಳಿಂದ ಜನಗಳಿಗೆ ಮೂಗಿಗೆ ತುಪ್ಪ ಸವರುವ ಕೆಲಸದಲ್ಲಿ ತೊಡಗಿದೆ. ಈ ಧೋರಣೆಯಿಂದ ಜನ ಬೇಸತ್ತಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜನಗಳು ತಕ್ಕ ಪಾಠ ಕಾಂಗ್ರೆಸ್ ಸರ್ಕಾರಕ್ಕೆ ಕಲಿಸಿದ್ದಾರೆ ಎಂದರು.

ತಹಶೀಲ್ದಾರ್ ಬಿ.ವಿ.ಗಿರಿಶ್ ಬಾಬು ಅವರಿಗೆ ಮನವಿ ಸಲ್ಲಿಸಿದರು ಈ ಸಂದರ್ಭದಲ್ಲಿ ಪುರಸಭೆ ಸದಸ್ಯರುಗಳಾದ ಕಿರಣ್ ಶಾನುಭೋಗ. ಗೌಳಿ ವಿನಯ್. ತರಕಾರಿ ಹನುಮಂತಪ್ಪ. ಕೌಟಿ ಮಂಜುನಾಥ್. ಬಿಜೆಪಿ ಮುಖಂಡರಾದ ಬಾಗಳಿ ಜಗದೀಶ್ .ಹೂವಿನ ಹಡಗಲಿ ಮಂಡಲದ ರೈತ ಮೋರ್ಚ ಅಧ್ಯಕ್ಷ ಶಿವನ ಗೌಡ.ನಂದಿಹಳ್ಳಿ ಬಸವರಾಜಪ್ಪ. ರಾಗಿ ಮಸಾಲವಾಡ ಮಾಂತೇಶ್. ಗೌಳಿ ಯಲ್ಲಪ್ಪ. ತೆಲಿಗಿ ನಾಗರಾಜ್. ಆಲೂರು ಶ್ರೀನಿವಾಸ್. ಗುಂಡಿ ಮಂಜುನಾಥ್. ಮಡಿವಾಳ ಮಾಂತೇಶ್ ಎಡತ್ತಿನಹಳ್ಳಿ ತಿರುಕಪ್ಪ. ಭೀಮಪ್ಪ.ಮಹೇಶ್ ಪೂಜಾರ್.ಸೊನ್ನದ ಗುಡ್ಡಪ್ಪ. ಇನ್ನಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಚನ ಅರಿವು

ಜೀವನವೆ ಪೂಜೆಯಾಗಬೇಕು

ಉದಯದಲೆದ್ದು ಗಡಗಡನೆ ನಡುಗುತ ಹೋಗಿ
ಹೂ ಗಿಡು ಪತ್ರೆಯ ಕಡಿವ ದೃಢಗೇಡಿಗಳು ನೀವು ಕೇಳಿರೊ.
ಅದು ಕಡು ಪಾಪವಲ್ಲವೆ ನಿಮಗೆ?
ನಡುಗಿರೊ ಪರಧನ ಪರಸ್ತ್ರೀಯರಿಗೆ.
ನಡುಗಿರೊ ಕೊಲೆ ಹುಸಿ ಕಳವು ಪಾರದ್ವಾರ ಅತಿಕಾಂಕ್ಷಕ್ಕೆ.
ನಡುಗಿರೊ ಹರನಿಂದ್ಯ ಗುರುನಿಂದ್ಯ ಅನಾಚಾರಕ್ಕೆ,
ಇದಕ್ಕೆ ನಡುಗದೆ ಮಳಿ ಛಳಿ ಗಾಳಿಗೆ ನಡುಗಿ
ಹೂ ಗಿಡ ಪತ್ರೆಯ ಕಡಿವ ಕಡುಪಾಪಿಗಳಿಗೆ
ನಿಮಗೆ ಮೃಡಪೂಜೆಯೆಲ್ಲಿಯದೊ? ಇಲ್ಲ,
ಅಖಂಡ ಪರಿಪೂರ್ಣ ಘನಲಿಂಗಗುರು ಚೆನ್ನಬಸವೇಶ್ವರ ಶಿವಸಾಕ್ಷಿಯಾಗಿ.

– ಕುಷ್ಟಗಿ ಕರಿಬಸವೇಶ್ವರ

ಬೆಳುಬೆಳಿಗ್ಗೆ ಎದ್ದು ಚಳಿಗೆ ನಡುಗುತ್ತ ಹೋಗಿ ಪೂಜೆಗೆ ಬೇಕೆಂದು ಹೂ, ಪತ್ರೆ ಹರಿದುಕೊಂಡು ಬಂದು ಪೂಜೆ ಮಾಡಿ ಪುಣ್ಯಗಳಿಸಿಕೊಂಡೆವೆಂದುಕೊಳ್ಳುತ್ತೇವೆ. ಕಿತ್ತು ತರುವುದು ಪಾಪವಲ್ಲವೆ? ಹೂ, ಪತ್ರೆ, ಗಿಡ, ಎಲೆ ಎಲ್ಲವನ್ನು ಶಿವನೇ ಸೃಷ್ಟಿಸಿದ್ದಾನೆ. ಅವು ಯಾವು ನಿಮ್ಮವಲ್ಲ. ಅಲ್ಲಿಯೇ ಅರ್ಪಣೆಯಾಗಬೇಕು. ಅದು ಪ್ರಕೃತಿ ನಿಯಮ. ನೀವು ನಡುಗಬೇಕಿರುವುದು ಮನಸ್ಸಿನಲ್ಲಿರುವ ಕೆಟ್ಟ ವಿಷಯ, ವ್ಯಸನಗಳಿಗೆ. ಬೇರೆಯವರ ಹಣವನ್ನು ಮೋಸದಿಂದ ಲಪಟಾಯಿಸುವುದು, ಬೇರೆಯವರ ಹೆಣ್ಣನ್ನು ಅಥವ ಗಂಡನ್ನು ಆಸೆ ಪಟ್ಟು ಕೂಡುವುದು. ಕೊಲೆ, ಸುಲಿಗೆ, ವಂಚನೆ, ಮೋಸ, ಸುಳ್ಳು, ಅನೈತಿಕ ಕೆಲಸಗಳಲ್ಲಿ ತೊಡಗುವವರು, ಶಿವ ನಿಂದೆ, ನಿಜ ಗುರುವನ್ನು ಅವಮಾನಿಸುವವರು, ಶರಣತತ್ವ ಒಪ್ಪದೆ ಬದುಕುವವರು ಶಿವಪೂಜೆ ಮಾಡಿದರೂ ಯಾವುದೇ ಫಲವಿಲ್ಲ. ಹೊರಗಿನ ಆಚರಣೆಗಿಂತ ಒಳಗಿನ ಆಚಾರವೇ ಮುಖ್ಯವೆನ್ನುತ್ತದೆ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯ- ಐದು ವರ್ಷಗಳಲ್ಲಿ 1.88 ಕೋಟಿ ರೂ. ಕಡಿತ : ಮುಖ್ಯಮಂತ್ರಿ ಸಿದ್ದರಾಮಯ್ಯ

ನವದೆಹಲಿ: ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದಾಗಿ 2017–18 ರಿಂದ ಕರ್ನಾಟಕಕ್ಕೆ 1,87,867 ಕೋಟಿ ರೂ.ಗಳ ನಷ್ಟವಾಗಿದ್ದು ಇದರಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಅವಕಾಶವನ್ನು ತಪ್ಪಿಸಿದಂತಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ಮತ್ತು ಕನ್ನಡಿಗರ ಮೇಲೆ ಕೇಂದ್ರ ಸರ್ಕಾರ ಎಸಗಿರುವ ಆರ್ಥಿಕ ದೌರ್ಜನ್ಯದ ಕೇಂದ್ರ ದ ವಿರುದ್ಧ ಜಂತರ್ ಮಂತರ್ ನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲಿನ ಹಂಚಿಕೆಯಲ್ಲಿ ಇಳಿಕೆ, ಮೂಲಸೌಕರ್ಯ ಬದ್ಧತೆಗಳ ಈಡೇರಿಕೆಯಲ್ಲಿ ಮತ್ತು ಕೇಂದ್ರ ಸರ್ಕಾರದಿಂದ ವಿಪತ್ತು ನಿರ್ವಹಣೆಗೆ ಅನುದಾನ ಬಿಡುಗಡೆಯಲ್ಲಿನ ವಿಳಂಬದ ಕುರಿತು ಸವಿಸ್ತಾರವಾಗಿ ಮಾತನಾಡಿದ ಅವರು, ಇದು ಕನ್ನಡಿಗರ ಅಸ್ಮಿತೆಯ ಮೇಲಾಗುತ್ತಿರುವ ವ್ಯವಸ್ಥಿತ ದಾಳಿ ಎಂದು ವ್ಯಾಖ್ಯಾನಿಸಿದರು. ಕೇಂದ್ರದ ನಿರ್ಲಕ್ಷ್ಯದಿಂದ ಕನ್ನಡಿಗರಿಗೆ ತೊಂದರೆಯುಂಟಾಗುತ್ತಿರುವುದು ಗಾಬರಿ ಹುಟ್ಟಿಸುವಂತಿದೆ.

ಕನ್ನಡಿಗರ ಹಿತಾಸಕ್ತಿಯನ್ನು ಕೇಂದ್ರ ಬಿಜೆಪಿ ನಾಯಕರು ದುರ್ಬಲಗೊಳಿಸುತ್ತಿದ್ದಾರೆ. ಸಂವಿಧಾನದೆಡೆಗೆ ಹಾಗೂ ಮತ್ತು ಸಹಕಾರಿ ಒಕ್ಕೂಟದೆಡೆಗೆ ಅವರ ಬದ್ಧತೆ ಇಲ್ಲವಾಗಿದೆ

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

ಬಾಗಿಲನು ತೆರೆದು

ನಾನೊಮ್ಮೆ ಉತ್ತರ ಕರ್ನಾಟಕದ ಪ್ರವಾಹಪೀಡಿತ ಹಳ್ಳಿಗೆ ಹೋಗಿದ್ದೆ. ಕಟ್ಟಿಗೆ ಮಾಳಿಗೆ ಮೇಲೆ ಮಣ್ಣಿನ ಮೇಲ್ಮುದ್ದೆ ಹಾಕಿ ಕಟ್ಟಿದ ಮನೆಗಳು ಕುಸಿದು ಧರಾಶಾಯಿ ಆಗಿದ್ದವು. ಅಟ್ಟವು ಮಸಣದಲ್ಲಿ ಎಸೆದುಹೋದ ಅನಾಥ ಚಟ್ಟದಂತೆ ವಾಲಿಕೊಂಡಿತ್ತು. ಅದರೊಳಗಿದ್ದ ಮಡಕೆ, ಸಪ್ಪೆದಂಟಿನ ಕಂತೆ, ಮುರಿದ ನೇಗಿಲು, ಸರವಿ, ಹಳೆಯಕೌದಿ ಬೀದಿಗೆ ಉಚಿತ ದರ್ಶನ ಕೊಡುತ್ತಿದ್ದವು. ಮನೆಯವರು ಅಂಗಳದಲ್ಲಿ ತಬ್ಬಲಿಗಳಂತೆ ಕೂತಿದ್ದರು. ಅದರ ಎದುರು ಮನೆಗಳೂ ಬಿದ್ದಿದ್ದವು. ಒಬ್ಬಾಕೆ ತನ್ನ ಮನೆಯ ಮಣ್ಣನ್ನು ಪಕ್ಕದ ಮನೆಯವಳು ಬಾಚಿಕೊಂಡಿರುವುದಕ್ಕೆ ಲಡಾಯಿ ಶುರುಮಾಡಿದ್ದಳು. ಇಬ್ಬರೂ ಮುಂದೆ ಕೇಶಾಕೇಶಿ ಕುಸ್ತಿಪಟುಗಳಾಗಿ ಕೆಸರ ಮುದ್ದೆಗಳಾಗುತ್ತಿದ್ದರು. ಅವರ ಗಂಡಂದಿರು ತಮಗೇನೂ ಸಂಬಂಧವಿಲ್ಲದಂತೆ ಇಬ್ಬರೂ ಜತೆಯಲ್ಲಿ ಕೂತು ಬೀಡಿಸೇದುತ್ತ ಸಿನಿಮಾದಂತೆ ಸತೀಕಾಳಗವನ್ನು ನೋಡುತ್ತಿದ್ದರು.

ಗಮನಿಸಿದೆ. ಈ ಗೃಹಭಂಗದ ದುರಂತ ನಾಟಕದಲ್ಲಿ ಬಾಗದೆ ಮುರಿಯದೆ ನೆಟ್ಟಗೆ ನಿಂತಿದ್ದು ಬಾಗಿಲು ಚೌಕಟ್ಟುಗಳು ಮಾತ್ರ. ನೀಲಬಣ್ಣ ಬಳಿದಿದ್ದ ಅವುಗಳ ಮೇಲ್ಕಟ್ಟಿನ ಎಡಬಲಗಳಲ್ಲಿ ಬೆಳ್ಳನೆಯ ಸೂರ್ಯ ಚಂದ್ರರಿದ್ದರು. ಈ ಆಗಸ ಕಾಯಗಳು ತಮ್ಮ ಬೆಳಕಿನಿಂದಲೇ ಅರಳಿಸಿದಂತಿದ್ದ ಹೂವೊಂದು ನಡುವೆ ನಗುತ್ತಿತ್ತು. ಎರಡೂ ಬದಿಗೆ ಕುದುರೆಯ ಮುಖಗಳು ಮನೆದೇರನ್ನು ಎಳೆಯುತ್ತಿವೆ ಎಂಬಂತೆ ಸಿಕ್ಕುಗೊಂಡಿದ್ದವು.

ನಮ್ಮ ಜನ ಬಹಳ ವಿಶೇಷ. 'ಏನು ಗೂಟ ಬಡ್ಕೊಂಡು ಯಾರೂ ಇರಲ್ಲ. ಒಂದಲ್ಲ ಒಂದಿನ ಹೋಗೋದೇ' ಎಂದು ನುಡಿಯುತ್ತಾರೆ. ತಮ್ಮ ಮನೆ, ರಾಜ್ಯ, ಕೀರ್ತಿ, ಅಧಿಕಾರಗಳು ಆಚಂದ್ರಾರ್ಕ ಇರಬೇಕು ಎಂದು ಅಪೇಕ್ಷಿಸುತ್ತಾರೆ. ಆದರೆ ಸೂರ್ಯ ಚಂದ್ರರ ಹೆಸರುಳ್ಳ ಎಷ್ಟೊಂದು ಸಾಮ್ರಾಜ್ಯಗಳು ಕಾಲಪ್ರವಾಹದಲ್ಲಿ ಅಳಿದುಹೋಗಿವೆ? ಇನ್ನು ಕಲ್ಲುಮಣ್ಣಿನ ಮನೆಗಳ ಪಾಡೇನು? ಹೀಗಿದ್ದೂ ಮನೆ ಬಿದ್ದರೂ ಕಿಟಕಿಬಾಗಿಲು ಮಾತ್ರ ಹೊಸಮನೆಗೆ ತೊಡವಾಗಿ ಹೋಗಿ ಮರುಜನ್ಮ ಪಡೆಯುತ್ತವೆ. ಹಳೆ ಮನೆಯ ಬಾಗಿಲು–ಕಿಟಕಿ ಮಾರುವ ಗುಜರಿಗಳೇ ಉಂಟು. ಮಾಳಿಗೆ–ಗೋಡೆಗಳನ್ನು ಯಾರೂ ಮಾರುವುದಿಲ್ಲ.

ಬಾಗಿಲು ಮತ್ತು ಅವನ್ನು ಅಪ್ಪಿಹಿಡಿವ ಚೌಕಟ್ಟುಗಳು ನನ್ನಲ್ಲಿ ಏನೇನೊ ಕಲ್ಪನೆ ಕೆರಳಿಸುತ್ತವೆ. ಮನೆಗಳದ್ದು ಮಾತ್ರವಲ್ಲ, ಬಸ್ಸು ರೈಲು ವಿಮಾನ ಟ್ರಜರಿ ಕೋಟೆ ಕೋಳಿದೊಡ್ಡಿ ಗುಬ್ಬಿಗೂಡುಗಳ ಬಾಗಿಲುಗಳನ್ನೂ ಗಮನಿಸುತ್ತೇನೆ. ಹಕ್ಕಿ, ತಾನಷ್ಟೆ ಪ್ರವೇಶಿಸುವಂತೆ, ತನ್ನ ಮರಿಗಳನ್ನು ಕಬಳಿಸುವ ವೈರಿಗಳು ಬಾರದಂತೆ, ಎಷ್ಟು ಜನತದಿಂದ ಬಾಗಿಲಿಡುತ್ತದೆ? ಅಪಹರಿಸಿದ ತಂದ ರಾಜಕುವರಿ ತಪ್ಪಿಸಿಕೊಳ್ಳದಂತೆ ಗುಹೆಗೆ ಬಂಡೆ ಮುಚ್ಚಿಹೋಗುತ್ತಿದ್ದ ರಕ್ಕಸನ ಕತೆ ಓದದವರು ಯಾರು? ಯೋನಿದ್ವಾರದಲ್ಲಿ ಹುಟ್ಟಿ ಬಂದೆಲ್ಲಾ ಎಂದು ಪರಿತಪಿಸುವ ವಿರಕ್ತರ ತತ್ವಪದಗಳನ್ನು ಕೇಳದವರು ಯಾರು? ಪುರಾಣದ ಪ್ರಕಾರ, ಸ್ವರ್ಗ ನರಕಗಳಿಗೂ ಬಾಗಿಲುಗಳಿವೆ. ಅವು ನಿರ್ದಿಷ್ಟ ಕಾಲದಲ್ಲಿ ಎಲ್ಲರಿಗೂ ತೆರೆದುಕೊಳ್ಳುತ್ತವೆ. ಅಲ್ಲಿ ವಿಚಾರಣೆ ನಡೆದು ಒಳಬಿಟ್ಟುಕೊಳ್ಳುವ ವ್ಯವಸ್ಥೆಯೂ ಇದೆ. ಕನಸಿನಲ್ಲೊಮ್ಮೆ ಕುವೆಂಪು ಸ್ವರ್ಗಕ್ಕೆ ಹೋದಾಗ ಬಾಗಿಲೇ ತೆರೆಯಲಿಲ್ಲ. ಹೇಮಿಯ ಗಂಡ ಎಂದು ನುಡಿದ ಬಳಿಕವಷ್ಟೆ ಪ್ರವೇಶ ಸಿಕ್ಕಿತು– ಅಲೀಬಾಬಾನಿಗೆ ಕೊಪ್ಪರಿಗೆ ಸಂಪತ್ತುಳ್ಳ ಗುಹೆಬಾಗಿಲು ಖಿಲ್ಜಾ ಸಿಂಸಿಂ ಎಂದಾಗ ತೆರೆದಂತೆ.

ನನಗೆ ನಮ್ಮೂರನ್ನು ಮಲೆನಾಡಿನ ಹೆಬ್ಬಾಗಿಲು ಎಂದು ಕರೆಯುತ್ತಿರುವುದು ನೆನಪಾಗುತ್ತಿದೆ. ಯಾವುದೇ ದೇಶವನ್ನು ಪ್ರವೇಶಿಸುವಲ್ಲಿ ಸಿಗುವ ಮೊದಲ ಊರೇ ಬಾಗಿಲು. ಬ್ರಿಟಿಶರ ಪಾಲಿಗೆ ಮುಂಬೈ 'ಗೇಟ್ವೇ ಆಫ್ ಇಂಡಿಯಾ' ಆಯಿತು. ಕಷ್ಟವೆಂದರೆ, ಒಮ್ಮೆ ಬಾಗಿಲೊಳಗೆ ಬಂದವರು ವಾಪಸಾಗದೆ ಇರುವುದು. ಒಂದೊಮ್ಮೆ ಮರಳಿದರೂ ಅವರನ್ನು ಸ್ವಾಗತಿಸಿದ ಬಾಗಿಲುಗಳು ಸ್ಮಾರಕವಾಗಿ ಉಳಿದುಬಿಡುತ್ತವೆ. ಹಳಗಾಲದಲ್ಲಿ ಊರುಗಳಿಗೆ ಹೆಬ್ಬಾಗಿಲು ಇರುತ್ತಿತ್ತು. ತಳವಾರರು ಸಂಜೆ ಅದನ್ನು ಮುಚ್ಚಿ ಬೆಳಿಗ್ಗೆ ತೆರೆಯುತ್ತಿದ್ದರು. ಊರೆಲ್ಲ ಕೊಳ್ಳೆಹೋದ ಮೇಲೆ ದಿಡ್ಡಿಬಾಗಿಲು ಹಾಕುವ ಗಾದೆ ಹುಟ್ಟಿದ್ದು ಇಂತಹ ಕಡೆಯಲ್ಲೇ. ಒಂದೊಮ್ಮೆ ಸೂರೆ ಹೊಡೆಯುತ್ತ ಅಕಸ್ಮಾತ್ ಕಳ್ಳ ಸಿಕ್ಕರೆ, ಅವನನ್ನು ಶೂಲಕ್ಕೇರಿಸಿ ದಿಡ್ಡಿಬಾಗಿಲಿಗೆ ತೋರಣದಂತೆ ಕಟ್ಟುತ್ತಿದ್ದರು. ನರಸಿಂಹಾವತಾರಿ ವಿಷ್ಣು ಕೂಡ, ಮನೆಯ ಒಳ–ಹೊರವಲ್ಲದ ಹೊಸಿಲನ್ನು ಹಿರಣ್ಯಕಶಿಪು ಸಂಹಾರಕ್ಕೆ ಆರಿಸಿಕೊಂಡು, ಅದನ್ನು ವಧಾಸ್ಥಂಭಕ್ಕೆ ಇಳಿಸಿಬಿಟ್ಟನು.

ನಾವು ಮನೆ ಕಟ್ಟಲು ಆರಂಭಿಸಿದಾಗ ಬನಶಂಕರಿ ಬಾಗಿಲನ್ನು ಇಡಬೇಕೆಂದು ಆಸೆಯಾಯಿತು. ಮೈತುಂಬ ಕುಸುರಿ ಕೆತ್ತನೆಯುಳ್ಳ ಆ ಬಾಗಿಲು ಕಟ್ಟಿಗೆಯ ಒಡವೆ. ಅಮ ರೂಪುಗೊಳ್ಳುವ ಕ್ರಮವೇ ವಿಶಿಷ್ಟ. ಸುತಾರರು ಚೌಕಟ್ಟಿನ ನಾಲ್ಕು ಎಡೆಗಳಿಗೂ ಆಲಂಕಾರಿಕ ಕೆತ್ತನೆ ಮಾಡಿ, ಒಂದರ ಉಗುಲನ್ನು ಇನ್ನೊಂದರ ಚಾಚಿನಲ್ಲಿ ಕೀಲಿಸುವರು. ಬಳಿಕ ಚೌಕಟ್ಟಿಗೆ ಬಾಗಿಲು ಜೋಡಿಸುವಿಕೆ. ನಂತರ ಅದಕ್ಕೆ ಚಿಲಕ, ಕೊಂಡಿ, ಅಗಳಿ, ಕೀಲಿಗಳ ಅಳವಡಿಕೆ. ಹೊರಗಿಂದ ಬಂದವರನ್ನು ಒಳಗಿದ್ದೇ ತಿಳಿಯಲು ಹಣೆಗಣ್ಣಿನಂತಹ ದುರ್ಬೀನು. ಇದು ಮದುಮಗಳನ್ನು ನತ್ತು ಮೂಗುತಿ ಓಲೆಗಳಿಂದ ಅಲಂಕರಿಸುವಂತೆ ತೋರುತ್ತದೆ. ವಿಭಿನ್ನ ಧಾತುಗಳಾದ ಕಟ್ಟಿಗೆ ಲೋಹ ಗಾಜುಗಳೆಲ್ಲ ಒಂದು ಉದ್ದೇಶಕ್ಕೆ ಕೂಡುವುದು, ಮನೆಯೊಳಗಿನ ಮಂದಿಗೆ ಬಾಳತತ್ವವನ್ನೇ ಹೇಳುವಂತೆಯೂ ಕಾಣುತ್ತದೆ.

ಬಾಗಿಲನ್ನು ಎಷ್ಟೇ ಭವ್ಯವಾಗಿ ರಚಿಸಲಿ, ಅದಕ್ಕೊಂದು ಅಸ್ಮಿತೆ ಸಿಗುವುದು ಮುನಿಸಿಪಾಲಿಟಿ ನಂಬರಿನಿಂದ. ಈ ನಂಬರು ಇಡೀ ಮನೆಯನ್ನು ಪ್ರತಿನಿಧಿಸುತ್ತ ಹೊರಲೋಕಕ್ಕೆ ವಿಳಾಸದ ಕೊಂಡಿಯಾಗುವುದು. ಇಂಗ್ಲೆಂಡಿನ ಪ್ರಧಾನಮಂತ್ರಿಯ ಮನೆಯ ಹೆಸರು ಯಾವನಿಗೊತ್ತು? ನಂಬರ್ 10, ಡೌನಿಂಗ್ ಸ್ಟ್ರೀಟ್ ಎಂದರೆ ಎಲ್ಲರಿಗೂ ತಿಳಿಯುತ್ತದೆ. ಬಾಗಿಲುಗಳು ಕೇವಲ ಸಂಖ್ಯೆಗಳನ್ನಲ್ಲ, ಬೇರೆಬೇರೆ ಬರೆಹಕ್ಕೆ

ಕಪ್ಪುಹಲಗೆ ಆಗುತ್ತವೆ. ಹಿಂದೆ ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆಯುತ್ತಿದ್ದರು. ದೆವ್ವ ಅನಕ್ಷರಸ್ತವಾದರೆ ಅಥವಾ ಇಂಗ್ಲೀಶನ್ನಷ್ಟೆ ಕಲಿತಿದ್ದರೆ ಬರೆದೂ ಉಪಯೋಗವಿಲ್ಲ. ಸಾಲವಸೂಲಿಯ ಅಧಿಕಾರಿಗಳು ಎಚ್ಚರಿಕೆ ಅಂಟಿಸಿ ಬಾಗಿಲನ್ನು ನೋಟಿಸು ಬೋರ್ಡನ್ನಾಗಿ ಮಾಡುವುದಿದೆ. ಕೊರೊನಾ ಪೀಡಿತರ ಮನೆಬಾಗಿಲಿಗೆ ಹಚ್ಚಿದ ಪತ್ರಗಳಂತೂ ಇಲ್ಲಿ ಬಾಂಬಿದೆ ಎಂಬಂತೆ ಭಯೋತ್ಪಾದನೆ ಸೃಷ್ಟಿಸಿದ್ದವು.

ದೇಶರಕ್ಷಣೆಗೆ ಸೈನ್ಯವಿದ್ದಂತೆ ಮನೆಗೆ ಬಾಗಿಲು. ಕಳ್ಳಕಾಕರಿಂದ ಪೆಟ್ಟು ತಿಂದರೂ ಜಗ್ಗಬಾರದೆಂದೇ ಅದಕ್ಕೆ ಗಟ್ಟಿತನ. ಮನೆಮಾಲಕರ ಭಯಕ್ಕೂ ಅದರ ರಚನ ವಿನ್ಯಾಸಕ್ಕೂ ಸಂಬಂಧವಿದೆ. ಯಾರಾದರೂ ಬಲವಂತದಿಂದ ಬಾಗಿಲು ಮುರಿಯಲು ಯತ್ನಿಸಿದರೆ, ತಲೆಯ ಮೇಲೆ ಚೂಪಾದ ಹಾರೆ ಬಾಣದಂತೆ ಬೀಳುವ ವ್ಯವಸ್ಥೆಯಿದ್ದ ವಾಡೆಯನ್ನು ನಾನು ನೋಡಿರುವೆ. ಕೋಟೆಗಳಿಗಂತೂ ಚೂಪಾದ ಮೊಳೆನೆಟ್ಟ ಮುಳ್ಳಗಸಿ ಬಾಗಿಲುಗಳಿದ್ದವು. ಮನೆಯೊಳಗಿನ ಸಂಪತ್ತು ಹೆಚ್ಚಿದಷ್ಟೂ ಮುಂಬಾಗಿಲ ಮೇಲೆ ಹೊಣೆ ಹೆಚ್ಚುತ್ತದೆ. ಬಡವರ ತಡಿಕೆ ಬಾಗಿಲಿನ ನಿರಾಳತೆ ಇದಕ್ಕಿಲ್ಲ. ನಾನು ವೈನಾಡಿನಲ್ಲಿ ಆನೆಗಳು ಸುಳಿದಾಡುವ ಪ್ರದೇಶದಲ್ಲಿದ್ದ ಸೋಲಿಗರ ಮನೆಯ ಬಾಗಿಲನ್ನು ನೋಡಿದೆ. ಕಟ್ಟಿದ ಹುರಿ ಬಿಚ್ಚಿ ಒಳಗೆ ಹೋಗಬೇಕು. ಕಳ್ಳತನದ ಪ್ರಶ್ನೆಯೇ ಇಲ್ಲ. ಆದರೆ ನಗರಗಳಲ್ಲಿ ಎಷ್ಟೇ ಗಟ್ಟಿಬಾಗಿಲಿದ್ದರೂ, ಮುರಿದು ನಗನಾಣ್ಯ ದೋಚಿದ ಸುದ್ದಿ ವರದಿಯಾಗುತ್ತವೆ. ಕಳ್ಳರಿಗೂ ಬಾಗಿಲುಗಳಿಗೂ ಯಾವೆಲ್ಲ ರಹಸ್ಯ ಒಪ್ಪಂದಗಳಿವೆಯೊ? ಕಳ್ಳರು ಹೊಕ್ಕ ಮನೆಯ ಬಾಗಿಲು ರಣರಂಗದಲ್ಲಿ ಗಾಯಗೊಂಡ ಸೈನಿಕರಂತೆ ತೋರುತ್ತವೆ.

ರಹಮತ್ ತರೀಕೆರೆ
ಸಂಸ್ಕೃತಿ ಚಿಂತಕರು

ಮುಂಬಾಗಿಲಿಗೆ ದೃಢತೆಯಷ್ಟೆ ಅಲಂಕಾರವೂ ಇರುತ್ತದೆ. ಬಾಗಿಲ ಚೌಕಟ್ಟು ಕೆತ್ತನೆಗೆ ಬೇಕಾಗಿ ಅಗಲವಾಗಿರುತ್ತವೆ. ಅವುಗಳ ಮೇಲೆ ಬಳ್ಳಿ ಹಬ್ಬಿ ಹೂಹಣ್ಣು . ಆ ಹಣ್ಣು ತಿನ್ನಲು ಗಿಳಿಗಳು ಕೂರುವವು. ಮನೆದೇವರ ಕೆತ್ತನೆ–ಗಜಲಕ್ಷಿ, ಗಣಪತಿ, ಬುದ್ಧ, ತೀರ್ಥಂಕರ. ಅವುಗಳ ಕೆಳಗೆ ಮಾವಿನೆಲೆಯ ಅಥವಾ ನೆಲ್ಲುತೆನೆಯ ತೋರಣ. ಇದಕ್ಕೆ ಹೋಲಿಸಿದರೆ ಜನರಿಂದ ತುಳಿಸಿಕೊಳ್ಳುವ ಹೊಸಿಲಿಗೆ ಅಲಂಕಾರವಿಲ್ಲ. ತುಳಿತಕ್ಕೆ ಒಳಗಾಗುವವರಿಗೆ ಅಲಂಕಾರ ಯಾಕೆ ಎಂಬ ಭಾವವಿರಬೇಕು. ಆದರೇನಂತೆ ಹೊಸಿಲಿಗೆ ನಿತ್ಯಪೂಜೆಯಿದೆ. ಅಂಗಳ ಗುಡಿಸಿ, ಸಗಣಿನೀರು ಚಿಮುಕಿಸಿದ ಬಳಿಕ, ಹೊಸಿಲ ಎರಡೂ ತುದಿಗೆ ಭೂಚಕ್ರದ ರಂಗವಲ್ಲಿ ಬರೆದು ಹೂವಿಡುವ ಪದ್ಧತಿಯಿದೆ. ಮುಖದಿಂದ ವ್ಯಕ್ತಿಯ ಅಂತರಂಗ ಅರಿಯುವಂತೆ, ಹೊಸಿಲನ್ನು ನೋಡಿ ಮನೆಯವರ ಕ್ರಿಯಾಶೀಲತೆ ಅರಿಯಬಹುದು. ಬಸವಣ್ಣನವರು ಹೊಸಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿದರೆ ಮನೆಯೊಳಗೆ ಮನೆಯೊಡೆಯನಿಲ್ಲ ಎಂದು ತಿಳಿಯಿರಿ ಎಂದಿದ್ದು ನಿಜ.

ಹೊಸಿಲು, ಒಳ–ಹೊರ ಜಗತ್ತುಗಳನ್ನು ಒಗ್ಗೂಡಿಸುವ ಅಥವಾ ಬೇರ್ಪಡಿಸುವ ಗಡಿ. ಜಗತ್ತಿನಲ್ಲಿ ಹೆಚ್ಚು ಯುದ್ಧಗಳಾಗಿರುವುದು ಗಡಿ ತಂಟೆಗೆ ತಾನೇ? ಹೊಸಿಲು ಸ್ವಾಗತಿಸುವ ಬೀಳ್ಕೊಡುವ ಕೋಲಾಹಲಕರ ವಿದ್ಯಮಾನಕ್ಕೆ ಸಾಕ್ಷಿ. ಕೆಲವೆಡೆ ಹೊಸಿಲಿಗೆ ತಾಮ್ರದ ಕಾಸಿಟ್ಟು ಮೊಳೆ ಜಡಿವುದುಂಟು–ಲಕ್ಷ್ಮಿ ಮನೆಬಿಟ್ಟು ಹೋಗದಿರಲೆಂದು. ಮದುಮಗಳನ್ನು ತುಂಬಿಸಿಕೊಳ್ಳುವಾಗಲೂ ಮೊಳೆ ಹೊಡೆಯುವರು. ಎಂತಲೇ ಸೊಸೆಮುದ್ದು ಅತ್ತೆಯೊಂದಿಗೆ ಯುದ್ಧವಾದಾಗ 'ನಾನು ಮೊಳೆ ಬಡಿಸಿ

ಕವಿ ಮನಸು

ಟಿ ವಿ ಅಂದು ಇಂದು

1980 –ತೊಂಬತ್ತು ದಶಕಗಳ ಕಾಲವಿತ್ತು
ಅಂಟೇನಾ ಮನೆ ಮೇಲೆ ಮೆರೆಯುತಿತ್ತು
ಮನೆಯ ಒಳಗೊಂದು ಟಿ ವಿ ಇತ್ತು
ಮನೆಯವರ ಕಿಮ್ಮತ್ತು ಹೆಚ್ಚಿಸಿತ್ತು

ಕೆಲವರಿಗೆ ಟಿ ವಿ ಕೊಳ್ಳಲು ಕಾಸಿರಲಿಲ್ಲ
ಬರೀ ಅಂಟೇನಾ ಮನೆ ಮೇಲೆ ಕಟ್ಟಿದರಲ್ಲ
ತಮ್ಮ ಮನೆಯಲ್ಲೂ ಟಿ ವಿ ಇದೆ
ಎಂದುಕೊಳ್ಳಲಿ
ಉರಿದುಕೊಳ್ಳುವವರ ಹೊಟ್ಟೆ ತಣ್ಣಗಾಗಲಿ

ರವಿವಾರ ರಾಮಾಯಣ ಮಹಾಭಾರತ
ಪ್ರಸಾರ
ಪ್ರಸ್ತುತಿ ರಮಾನಂದ ಸಾಗರ, ರವಿಚೋಪ್ರಾ
ದೆಹಲಿಯಿಂದ ದೂರ ದರ್ಶನ ನೇರ
ಪ್ರಸಾರ
ಟಿ ವಿ ಇದ್ದವರ ಮನೆಯಲ್ಲಿ ಜನ
ಭರಪೂರ

ಮನೆಯಲ್ಲಿ ಟಿ ವಿ ಗಾಗೆ ಒಂದು ಹಾಲು
ಅಕ್ಕ ಪಕ್ಕದವರು ಕೂತರು ಸಾಲು ಸಾಲು
ಮಗು ಅತ್ತರೂ ಅಮ್ಮ ಕೊಡಲಿಲ್ಲ ಹಾಲು
ಏಕೆಂದರೆ ಎಲ್ಲರಿಗೂ ಕೊಡಬೇಕಲ್ಲ ಪಾಲು

ಡಿ ಡಿ ಒಂದರಲ್ಲಿ ಮುಂಜಾನೆ ಸಂಜಾನೆ
ಎಂಟು ಗಂಟೆಗೆ ಸುದ್ದಿಗಳ ಬಿತ್ತರ
ಸುದ್ದಿ ಬಿತ್ತರದ ಮುನ್ನ ಹಾಗು ನಂತರ
ಬರುತಿದ್ದ ಸಂಗೀತ ಬಹು ಸುಂದರ

ಬಂತು ಬಣ್ಣದ ಟಿ ವಿ ಕಾಲ ಸರಿದಂತೆ
ವಿವಿಧ ಭಾಷೆಗಳಲಿ ಧಾರಾವಾಹಿ ಸಂತೆ
ವರುಷಗಳು ಮುಗಿದರೂ ಮುಗಿಯದಂತೆ
ಸಾಗುತಿಹವು ಇಂದಿಗೂ ಅದೇ
ಸಂಚಿಕೆಗಳಂತೆ

ಮನೆಯಲ್ಲಿ ಊಟವಿಲ್ಲದಿದ್ದರೂ ಚಿಂತೆ
ಇಲ್ಲ
ಕ್ರಿಕೆಟ್ ಧಾರವಾಹಿ ನೋಡಲು ಟಿ ವಿ
ಬೇಕಲ್ಲ
ಅದೊಂದು ಮೂರ್ಖ ಪೆಟ್ಟಿಗೆ ಎನ್ನುವರಲ್ಲ
ಆದರೆ ಅದ ನೋಡದಲೇ ಸಮಾಧಾನವಿಲ್ಲ

ಮುಂದುವರೆದಿದೆ ಮುಂದುವರೆಯುತ್ತಲಿದೆ
ದಿನ ದಿನಕೆ ಹೊಸ ತಂತ್ರ ಜ್ಞಾನದ
ಆವಿಷ್ಕಾರ
ಕ್ಷಣ ಮಾತ್ರದಲ್ಲಿ ಸುದ್ದಿಗಳನ್ನು ನೆರಪ್ರಸಾರ
ಎಷ್ಟು ಹೊಗಳಿದರೂ ಸಾಲದು ಟಿವಿ ನಿನಗೆ
ನಮಸ್ಕಾರ

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್ ಹೊಸಪೇಟೆ

ತುಂಗಭದ್ರಾ ನೀರಿನ ಮಟ್ಟ

ಬುಧವಾರ: 07–02–2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1588.09 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	272 ಕ್ಯುಸೆಕ್
ಇಂದಿನ ಸಾಮರ್ಥ್ಯ	9.508 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1614.08 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	9732 ಕ್ಯುಸೆಕ್
ಸಾಮರ್ಥ್ಯ	46.266 ಟಿಎಂಸಿ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಅಪರೂಪದ ಅತಿಥಿ ಭಾರತೀಯ ಸ್ಕಿಮ್ಮರ್

ಒಡಿಶಾದ ಈ ಹಕ್ಕಿಗಿದೆ ಕಪ್ಪು ಟೋಪಿ, ಕಿತ್ತಳೆ ಬಣ್ಣದ ಬಿಲ್ಲು । ಅತಿಥಿಯಾಗಿ ಬಂದ ಪಕ್ಷಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ

■ ಹರ್ಷ ಕೆ.ಎಂ.

ಅತಿ ವಿರಳ ಹಾಗೂ ಅಳಿವಿನಂಚಿನಲ್ಲಿರುವ ಪಕ್ಷಿ ಪ್ರಭೇದ ಭಾರತೀಯ ಸ್ಕಿಮ್ಮರ್ ಪಕ್ಷಿಯು ಎರಡು ವರ್ಷಗಳ ನಂತರ ಇದೀಗ ವಿಜಯನಗರ ಜಿಲ್ಲೆ ಹಂಪಿ ಅಂಗಳದ ತುಂಗಭದ್ರಾ ಜಲಾಶಯದ ಹಿನ್ನಿರಿನ ಬಳಿಯ ಗುಂಡಾ ಅರಣ್ಯದಲ್ಲಿ ಕಾಣಿಸಿಕೊಂಡಿರುರುವುದು ಪಕ್ಷಿಪ್ರಿಯರು ಹಾಗೂ ಪಕ್ಷಿ ಶಾಸ್ತ್ರಜ್ಞರಲ್ಲಿ ಕುತೂಹಲ ಮೂಡಿಸಿದ್ದು, ಭಾರತೀಯ ಸ್ಕಿಮ್ಮರ್ ಅಥವಾ ಭಾರತೀಯ ಕತ್ತರಿ–ಬಿಲ್ ಲಾರಿಡೆ ಕುಟುಂಬದಲ್ಲಿ ಸ್ಕಿಮ್ಮರ್ ಕುಲದ Rynchops ಗೆ ಸೇರಿದ ಮೂರು ಜಾತಿಗಳಲ್ಲಿ ಒಂದಾಗಿದೆ.

ಇದು ದೊಡ್ಡ ನದಿಗಳು ಮತ್ತು ಸರೋವರಗಳು, ಜೌಗು ಪ್ರದೇಶಗಳು ಮತ್ತು ನದೀಮುಖಗಳಂತಹ ಕರಾವಳಿ ತೇವಭೂಮಿಗಳಲ್ಲಿ ಕಂಡು ಬರುತ್ತದೆ. ಇತ್ತೀಚಿನ ದಶಕಗಳಲ್ಲಿ ಇದರ ವ್ಯಾಪ್ತಿಯು ಹೆಚ್ಚು ವಿಭಜಿತವಾಗಿದೆ. ಇದು ಇನ್ನೂ ಪಾಕಿಸ್ತಾನದ ಭಾಗಗಳಲ್ಲಿ ಕಾಶ್ಮೀರದ ಸಿಂಧೂ ನದಿ ವ್ಯವಸ್ಥೆಯಲ್ಲಿ ಮತ್ತು ಉತ್ತರ ಮತ್ತು ಮಧ್ಯ ಭಾರತದಲ್ಲಿ ಗಂಗಾ, ಕಂಡುಬಂದಿದೆ. ಇದು ನೇಪಾಳಕ್ಕೆ ಸಂತಾನವೃದ್ಧಿಯಾಗದ ಸಂದರ್ಶಕವಾಗಿದೆ ಮತ್ತು ಇರಾನ್ ಮತ್ತು ಚೀನಾದಿಂದ ಹಳೆಯ ದಾಖಲೆಗಳೊಂದಿಗೆ ಓಮನ್ ಮತ್ತು ಮಧ್ಯ ಥೈಲ್ಯಾಂಡ್‌ನಲ್ಲಿ ಅಲೆಮಾರಿಯಾಗಿ ಸಂಭವಿಸಿದೆ.

ಪ್ರಸ್ತುತ, ಭಾರತೀಯ ಸ್ಕಿಮ್ಮರ್‌ನ ಕೊನೆಯ ಭದ್ರಕೋಟೆಗಳು ಭಾರತ ಮತ್ತು ಬಾಂಗ್ಲಾದೇಶಗಳಾಗಿವೆ ಮಧ್ಯ ಭಾರತದ ಚಂಬಲ್ ನದಿಯ ಬಳಿ, ಒಡಿಶಾದ

ಕೆಲವು ಭಾಗಗಳಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಈ ಜಾತಿಗಳನ್ನು ಕಾಣಬಹುದು.

ಅವು ಚಳಿಗಾಲದಲ್ಲಿ ಹೆಚ್ಚು ವ್ಯಾಪಕವಾಗಿರುತ್ತವೆ ಮತ್ತು ಪಶ್ಚಿಮ ಮತ್ತು ಪೂರ್ವ ಭಾರತದ ಕರಾವಳಿ ನದೀಮುಖಗಳಲ್ಲಿ ದಕ್ಷಿಣಕ್ಕೆ ಪಶ್ಚಿಮ ಕರಾವಳಿಯಲ್ಲಿ ಕಾರವಾರದವರೆಗೆ ಕಂಡುಬರುತ್ತವೆ ಮತ್ತು ಪೂರ್ವ ಕರಾವಳಿಯಲ್ಲಿ ಚೆನ್ನೈ ಮತ್ತು ಪಾಂಡಿಚೇರಿ ಅಸ್ತಿತ್ವದಲ್ಲಿದೆ. ಈ ಹಕ್ಕಿಗೆ ಕಪ್ಪು ಟೋಪಿ ಮತ್ತು ಕಿತ್ತಳೆ ಬಣ್ಣದ ಬಿಲ್ಲು ಇದೆ, ಅದು ಬಿಳಿ ದೇಹಕ್ಕೆ ವ್ಯತಿರಿಕ್ತವಾಗಿದೆ. ಅದರ ಉದ್ದವಾದ ರೆಕ್ಕೆಗಳೊಂದಿಗೆ ಇದು ಟರ್ನ್ ತರಹ ಕಾಣುತ್ತದೆ ಮತ್ತು 108 ಸೆಂ.ಮೀ ರೆಕ್ಕೆಗಳನ್ನು ಹೊಂದಿರುವ ಸುಮಾರು 40–43 ಸೆಂ.ಮೀ ಉದ್ದವಿರುತ್ತದೆ. ದೇಹದ ಮೇಲಿನ ಭಾಗಗಳು ಗಾಢ ಕಪ್ಪು ಮತ್ತು ಕೆಳಭಾಗವು ಬಿಳಿಯಾಗಿರುತ್ತದೆ. ತಲೆಯ ಮೇಲಿನ ಕಪ್ಪು ಟೋಪಿ ಹಣೆ ಮತ್ತು ಕುತ್ತಿಗೆಯನ್ನು ಬಿಳಿಯಾಗಿ ಬಿಡುತ್ತದೆ. ಕಾಲುಗಳು ಮತ್ತು ಪಾದಗಳು ಕೆಂಪು. ಕೆಳಗಿನ ಬಿಲ್ ಚಾಕುವಿನಂತಿರುತ್ತದೆ ಮತ್ತು ಹೊಂದಿಕೊಳ್ಳುತ್ತದೆ ಮತ್ತು ತುದಿ ಮೊಟಕುಗೊಂಡಂತೆ ಕಾಣುತ್ತದೆ. ಭಾರತೀಯ ಸ್ಕಿಮ್ಮರ್‌ಗಳು ಮೇಲ್ಮೈ–ವಾಸಿಸುವ ಮೀನುಗಳನ್ನು ತಿನ್ನುತ್ತವೆ, ಆದಾಗ್ಯೂ, ಅವು ಸಣ್ಣ ಕಠಿಣಚರ್ ಮಿಗಳು ಮತ್ತು ಕೀಟಗಳ ಲಾರ್ವಾಗಳನ್ನು ಸಹ ತಿನ್ನುತ್ತವೆ.

ಸಾಗರ ಜೀವಿಗಳು ಮತ್ತು ಸಮುದ್ರ ಪ್ರೋಟೀನ್ಗಳು ಸ್ಕಿಮ್ಮರ್‌ನ ಆಹಾರದ ದೊಡ್ಡ ಭಾಗವಾಗಿದೆ. ಭಾರತೀಯ ಸ್ಕಿಮ್ಮರ್‌ಗಳು ಬೆರೆಯುವ ಪಕ್ಷಿಗಳಾಗಿದ್ದು, ಅವು ವಸಾಹತುಗಳಲ್ಲಿ ಗೂಡುಕಟ್ಟುತ್ತವೆ ಮತ್ತು ಮರಳಿನ ದಂಡೆಗಳಲ್ಲಿ ಹಿಂಡುಗಳಲ್ಲಿ ನೆಲೆಸುತ್ತವೆ. ತುಂಗಭದ್ರಾ ಹಿನ್ನೀರು, ಹಲವಾರು ಅಪಾಯದ ಜೀವಿಗಳ ಆವಾಸಸ್ಥಾನವಾಗಿದೆ, ಪ್ರತಿ ವರ್ಷ ಹಲವಾರು ವಲಸೆ ಬರುವ ಪಕ್ಷಿಗಳು ತುಂಗಭದ್ರಾ ನದಿ ಅಲ್ಲಿ ತಮ್ಮ ಸಮಯ ಕಳೆಯಲು ಸೇರುತ್ತವೆ. ತುಂಗಭದ್ರಾ ನದಿಯು ಹಲವಾರು ಪಕ್ಷಿಗಳಿಗೆ ನೆಲಸಲು ಒಳ್ಳೆಯ ವಾತಾವರಣದ ಜಾಗವಾಗಿದೆ ಪ್ರತಿ ವರ್ಷ ಬಾಯ್ಕಳಕ ಕೊಕ್ಕರೆ (Asian openbill), ಪಟ್ಟೆ–ತಲೆ ಹೆಬ್ಬಾತು (Bar-headed Goose), ರಾಜ್ಯಚಮಚ ಕೊಕ್ಕಿನ ಬಿಳಿ ಕೊಕ್ಕರೆ, ಗ್ಲೋಸಿ ಐಬಿಸ, ಮತ್ತು ಹಲವಾರು ಪಕ್ಷಿಗಳು ತುಂಗಭದ್ರಾ ನದಿಯ ಗುಂಡ ಅರಣ್ಯ ತೀರದಲ್ಲಿ ಕಾಣಿಸಿಕೊಳ್ಳುತ್ತದೆ. ತೀವ್ರವಾಗಿ ಅಳಿವಿನಂಚಿನಲ್ಲಿರುವ ಕೊನೆಯ ಭದ್ರಕೋಟೆಗಳಲ್ಲಿ ಒಂದಾಗಿದೆ, ಈ ದೃಶ್ಯವು ಗುಂಡಾ ಅರಣ್ಯ ಮರದ ಉದ್ಯಾನವನದ 1 ಕಿಲೋಮೀಟರ್ ಅಪ್ಸ್ಟ್ರೀಮ್ನಲ್ಲಿ ಸಂಭವಿಸಿದೆ. ಇವುಗಳು ಸಾಮಾನ್ಯವಾಗಿ ಪ್ರತಿ ವರ್ಷ ಆಂಧ್ರ ಪ್ರದೇಶಕ್ಕೆ ವಲಸೆ ಬರುತ್ತವೆ, ಕರ್ನಾಟಕದಲ್ಲಿ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ ಆದರೆ ಈ ವರುಷ ಅಳಿವಿನಂಚಿನಲ್ಲಿರುವ ಭಾರತೀಯ ಸ್ಕಿಮ್ಮರ್ ಪ್ರಮುಖ ಆವಾಸಸ್ಥಾನವಾಗಿ ವಿಜಯನಗರ ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ಗುಂಡ ಅರಣ್ಯ ತೀರದಲ್ಲಿ ಒಂಟಿಯಾಗಿ ಟರ್ನಿನಾ ಮಧ್ಯ ಕಾಣಿಸಿಕೊಂಡಿದ್ದ ನನಗೆ ತುಂಬಾ ಖುಷಿ ಕೊಟ್ಟಿದೆ ಮತ್ತು ನೀರಿನೊಳಗೆ ಆಹಾರಕ್ಕಾಗಿ ಸ್ಕಿಮ್ಮಿಂಗ್ ಮಾಡುತ್ತಿರುವುದು ದೃಶ್ಯ ಕಣ್ಣು ಕಟ್ಟುವಂತಿತ್ತು. ಮೊದಲು ನೋಡಿದ ತಕ್ಷಣ ಟರ್ನ್ ಎಂದು ಭಾವಿಸಿದ್ದೆ ಆದ್ರೆ ಅದರ ಗಾತ್ರ ಟರ್ನಿಗಿಂತ ದೊಡ್ಡದಿದೆ ಎಂದು ನನ್ನ ಕ್ಯಾಮರವಿನಿಂದ ಅದನ್ನು ಛಾಯಾಗ್ರಹಣ ಮಾಡಿ ನೋಡಿದಾಗ "ಭಾರತೀಯ ಸ್ಕಿಮ್ಮರ್ " ಎಂದು ತಿಳಿದು ಮನಸಿನಲ್ಲಿ ಉಲ್ಲಾಸ ಮೂಡಿತು. ಇಂತಹ ಸುಂದರವಾದ ಪಕ್ಷಿಯು ಕರ್ನಾಟಕದ ವಿಜಯನಗರ ಜಿಲ್ಲೆಯ ತುಂಗಭದ್ರಾ ನದಿಯಲ್ಲಿ ಕಾಣಿಸಿಕೊಂಡಿದ್ದು ಹೆಮ್ಮೆ ತಂದುಕೊಟ್ಟಿದೆ. ಇದೇ ತರಹದ ಹಲವಾರು ಪಕ್ಷಿಗಳಿಗೆ ನಮ್ಮ ಕರ್ನಾಟಕವು ಅದರ ಮನೆಯಾಗಿದೆ. ಇದರ ಸಂರಕ್ಷಿಸುವುದು ಮತ್ತು ನಮ್ಮ ನಾಡಿಗೆ ಬಂದ ಅತಿಥಿಗಳಿಗೆ ತೊಂದರೆ ಮಾಡದಂತೆ ನೋಡಿಕೊಳ್ಳುವುದು ಈ ಮಣ್ಣಿನ ಗುಣ ಹಾಗೂ ನಮ್ಮೆಲ್ಲರ ಕರ್ತವ್ಯವೂ ಹೌದು.

ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಳ್ಳಿ

ಡಿಸಿ ನಲಿನ್ ಅತುಲ್ ಹೇಳಿಕೆ । ಅಗ್ನಿವೀರ ಸೈನಿಕ ಹುದ್ದೆಯ ಲಿಖಿತ ಪರೀಕ್ಷೆಗಾಗಿ ಪತ್ರಿಕೆ ಹವ್ಯಾಸ ಬೆಳೆಸಿಕೊಳ್ಳಿ

■ ಹಂಪಿ ಟೈಮ್ಸ್ ಕೊಪ್ಪಳ

ಅಗ್ನಿವೀರ ಸೈನಿಕ ಹುದ್ದೆಯ ಲಿಖಿತ ಪರೀಕ್ಷೆ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಭಾಗವಹಿಸುವ ವಿದ್ಯಾರ್ಥಿಗಳು ನಿತ್ಯ ದಿನ ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.

ಜಿಲ್ಲಾ ಪಂಚಾಯತ್, ಎಲ್ & ಟಿ ಕಂಪನಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಜಯೋನ್ನತಿ ಶಿಕ್ಷಣ ಸೇವಾ ಟ್ರಸ್ಟ್, ಕೊಪ್ಪಳ ಇವರ ಸಹಯೋಗದಲ್ಲಿ ಬುಧವಾರ ನಗರದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾದ 'ಅಗ್ನಿವೀರ ಸೈನಿಕ ಹುದ್ದೆಯ ಲಿಖಿತ ಪರೀಕ್ಷೆಯ ತರಬೇತಿ ಶಿಬಿರ–2024'ರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ತರಬೇತಿ ಶಿಬಿರವು ಅಗ್ನಿವೀರ ಸೈನಿಕ ಹುದ್ದೆಯ ಲಿಖಿತ ಪರೀಕ್ಷೆ, ಎಫ್.ಡಿ.ಎ, ಎಸ್.ಡಿ.ಎ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗಲಿದೆ. ದೈನಂದಿನ ಓದುವ ಕ್ರಮವನ್ನು ಬದಲಾವಣೆ ಮಾಡಿಕೊಳ್ಳಬೇಕು. ದಿನನಿತ್ಯ ಓದುವ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಿ. ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ. ಒಂದು ಯಾವುದೇ ಸರ್ಕಾರಿ ಕಾರ್ಯಕ್ರಮದ ಬಗ್ಗೆ ಅಥವಾ ಯಾವುದೇ ಒಂದು ವಿಷಯದ ಬಗ್ಗೆ ತಿಳುವಳಿಕೆಯನ್ನು ಪಡೆದುಕೊಳ್ಳಲು ಕನಿಷ್ಠ ಬೇರೆ–ಬೇರೆ ಪತ್ರಿಕೆಗಳನ್ನು ಹಾಗೂ ಲೇಖನಗಳನ್ನು ಓದಬೇಕು. ಅಂದಾಗ ಮಾತ್ರ ನಿಮಗೆ ಸ್ಪಷ್ಟ ಮಾಹಿತಿ ತಿಳಿಯುವುದಕ್ಕೆ ಅನುಕೂಲವಾಗುತ್ತದೆ ಎಂದರು. ಯಶಸ್ಸನ್ನು ಪಡೆಯುವುದಕ್ಕಾಗಿ "ಕಾಕ ಚೇಷ್ಟ, ಬಕೋ ಧ್ಯಾನಂ, ಸ್ವಾನ ನಿಂದ್ರ ತಥೈವಚ, ಅಲ್ಪ–ಆಹಾರಿ, ಗೃಹತ್ಯಾಗಿ" ಈ ಪಂಚ ಲಕ್ಷಣಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕಾಗೆಯ ದೃಢ ನಿರ್ಧಾರ ಮತ್ತು ಪರಿಶ್ರಮ, ಬಕ ಪಕ್ಷಿಯಂತೆ ಏಕಾಗ್ರತೆ, ಶ್ವಾನದಂತೆ ಲಘುವಾಗಿ ಮಲಗುವುದು, ಅಲ್ಪ ಪ್ರಮಾಣದ ಆಹಾರ ಸೇವನೆ, ಮನೆಯ ಕೆಲಸ ಕಾರ್ಯಗಳಿಗೆ ಹೆಚ್ಚು

ಗಮನ ನೀಡದೆ ಓದಿನ ಕಡೆ ಹೆಚ್ಚು ಒತ್ತು ಕೊಡಬೇಕು. ಈ ಪಂಚ ಸೂತ್ರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದರ ಜೊತೆಗೆ ದೈಹಿಕ ಆರೋಗ್ಯ ಸದೃಢತೆಗೂ ಹೆಚ್ಚು ಗಮನ ನೀಡಬೇಕು. ಸಾಮಾಜಿಕ ಜಾಲತಾಣಗಳನ್ನು ಅಧ್ಯಯನ ಉದ್ದೇಶಕ್ಕೆ ಮಾತ್ರ ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಅಗ್ನಿವೀರ ಸೈನಿಕ ಹುದ್ದೆಯ ಲಿಖಿತ ಪರೀಕ್ಷೆಯ ತರಬೇತಿ ಶಿಬಿರ ಆಯೋಜಿಸುವ ಕುರಿತಂತೆ ಮಾಧ್ಯಮದವರು ಸಲಹೆನೀಡಿದ್ದರು. ಅದರಂತೆ ವಿದ್ಯಾರ್ಥಿಗಳಿಗಾಗಿ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸಾಮಾನ್ಯವಾಗಿ ಅಭ್ಯರ್ಥಿಗಳು ಶೇ.99 ರಷ್ಟು ತರಬೇತಿಯನ್ನು ಪೂರ್ಣಗೊಳಿಸಿಯೇ ಪರೀಕ್ಷೆ ಬರೆಯುತ್ತಾರೆ. ಇದರಲ್ಲಿ ಕೆಲವರು ಪಾಸ್ ಮತ್ತು ಇನ್ನೂ ಕೆಲವರು ಫೇಲ್ ಆಗುತ್ತಾರೆ. ಅನುತ್ತೀರ್ಣರಾದವರಲ್ಲಿ ಸಾಮಾನ್ಯವಾಗಿ ನಾವು ಲಕ್ಕಿ ಇಲ್ಲ, ಅವರು ಲಕ್ಕಿ ಇದ್ದಾರೆ ಎಂಬ ಭಾವನೆ ಬರುತ್ತದೆ. ಆದರೆ ಅರ್ಥ ಮಾಡಿಕೊಂಡರೆ, ಈ ರೀತಿಯ ಭಾವನೆ ಬರುವುದಿಲ್ಲ. ಸಫಲತೆ ಸಿಗದಿದ್ದಲ್ಲಿ ಯಾರೂ ಸಹ ನಿರಾಸಕ್ತರಾಗಬಾರದು. ಕಠಿಣ ಪರಿಶ್ರಮದಿಂದ ಕಡ್ಡಾಯವಾಗಿ ಯಶಸ್ಸು ಸಿಗುತ್ತದೆ. ನಿರಂತರ ಪ್ರಯತ್ನದಿಂದ ಸಫಲತೆ ಸಾಧ್ಯ. ಈ ಹಿನ್ನೆಲೆಯಲ್ಲಿ ನಿಮ್ಮ ಹೋರಾಟ ಇರಲಿ. ಪ್ರತಿ ದಿನ 4 ರಿಂದ 5 ಗಂಟೆಗಳ ಕಾಲ ಓದಿಗಾಗಿಯೇ ಮೀಸಲಿಡಿ. ಸಾಮಾಜಿಕ ಜಾಲತಾಣದಿಂದ ನಿಮ್ಮ ಓದಿಗೆ ಸಮಸ್ಯೆಯಾದರೆ ಅದನ್ನು ಇಂದೇ ನಿಲ್ಲಿಸಬೇಕು. ಅಗ್ನಿವೀರ ಸೈನಿಕ ಹುದ್ದೆಯ ಲಿಖಿತ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಈ ತರಬೇತಿ ಶಿಬಿರದ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ಜಿಲ್ಲೆಯಿಂದ ಹೆಚ್ಚು ಅಭ್ಯರ್ಥಿಗಳು ಅಗ್ನಿವೀರ ಸೈನಿಕ ಹುದ್ದೆಗೆ ಆಯ್ಕೆಯಾಗಬೇಕು ಎಂದು ಹೇಳಿದರು.

ಐ.ಎಫ್.ಎಸ್ ಅಧಿಕಾರಿಗಳಾದ ಕಾವ್ಯ ಚತುರ್ವೇದಿ ಅವರು ಮಾತನಾಡಿ, ಅಗ್ನಿವೀರ ಸೈನಿಕ ಹುದ್ದೆಗಳ ಲಿಖಿತ ಪರೀಕ್ಷೆಯು ರಾಷ್ಟ್ರೀಯ ಮಟ್ಟದ ಪರೀಕ್ಷೆಯಾಗಿದೆ. ಈ ತರಬೇತಿ ಕಾರ್ಯಕ್ರಮದ ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ಯಶಸ್ವಿಯಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಲೆಕ್ಕಾಧಿಕಾರಿಗಳಾದ ಅಮಿನ್ ಅತ್ತಾರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ರಾಜು ತಳವಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿಠ್ಠಲ ಬಿ ಜಾಬಗೌಡರ, ತಾ.ಪಂ ಇಒ ದುಂಡಪ್ಪ ತುರಾದಿ, ಮಾರ್ಗದರ್ಶಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸಂಸ್ಥೆಯ ಶರಣಯ್ಯ ಅಬ್ಬಿಗೇರಿಮಠ ಹಾಗೂ ಶ್ರೀಧರ ವಾಸಿ, ವಿಜಯೋನ್ನತಿ ಶಿಕ್ಷಣ ಸೇವಾ ಟ್ರಸ್ಟ್‌ನ ತಿಪ್ಪಣ್ಣ ಬಿಜಕಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಾಹನಗಳಿಗೆ ಹೆಚ್ ಎಸ್ ಆರ್ ಪಿ ಸಂಖ್ಯಾ ಅಳವಡಿಕೆ ಕಡ್ಡಾಯ

■ ಹಂಪಿ ಟೈಮ್ಸ್ ರಾಯಚೂರು

ಕರ್ನಾಟಕ ರಾಜ್ಯದಲ್ಲಿ 2019ರ ಏ.1ಕ್ಕಿಂತ ಮೊದಲು ನೋಂದಣಿಯಾಗಿಸಲ್ಪಟ್ಟ ಹಳೆಯ ಎಲ್ಲಾ (ಹಳೆಯ/ಅಸ್ತಿತ್ವದಲ್ಲಿರುವ ವಾಹನಗಳು) (ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳು, ಲಘು ಮೋಟಾರು ವಾಹನಗಳು, ಪ್ರಯಾಣಿಕ ಕಾರುಗಳು, ಮಧ್ಯಮ ಮತ್ತು ಭಾರಿ ವಾಣಿಜ್ಯ ವಾಹನಗಳು, ಟ್ರೈಲರ್, ಟ್ರ್ಯಾಕ್ಟರ್ ಇತ್ಯಾದಿ) ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಹೆಚ್.ಎಸ್.ಆರ್.ಪಿ) ಅಳವಡಿಸುವುದು ಕಡ್ಡಾಯವಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಿಳಿಸಿದ್ದ

ಮೈಕ್ರೋ ನ್ಯೂಸ್

ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ

ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತದಿಂದ ಸಂತ ಸೇವಾಲಾಲ್, ಸವಿತಾ ಮಹರ್ಷಿ, ಛತ್ರಪತಿ ಶಿವಾಜಿ ಮತ್ತು ಸರ್ವಜ್ಞ ಜಯಂತಿ ಸೇರಿದಂತೆ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಹೇಳಿದರು.

ಬುಧವಾರದಂದು, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಮಹನೀಯರ ಜಯಂತಿ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಫೆ.15 ರಂದು ಶ್ರೀ ಸಂತ ಸೇವಾಲಾಲ್ ಜಯಂತಿಯನ್ನು ವಾಲ್ಮೀಕಿ ಸಮುದಾಯ ಭವನದಲ್ಲಿ, ಫೆ.16 ರಂದು ಸವಿತಾ ಮಹರ್ಷಿ ಜಯಂತಿಯನ್ನು ಬಿಡಿಎಎ ಪುಟ್ಬಾಲ್ ಮೈದಾನ ಸಭಾಂಗಣದಲ್ಲಿ, ಫೆ.19 ರಂದು ಸಂಜೆ ಛತ್ರಪತಿ ಶಿವಾಜಿ ಜಯಂತಿಯನ್ನು ಬಿಡಿಎಎ ಪುಟ್ಬಾಲ್ ಮೈದಾನ ಸಭಾಂಗಣ ಮತ್ತು ಫೆ.20 ರಂದು ಸರ್ವಜ್ಞಜಯಂತಿಯನ್ನೂ ಬಿಡಿಎಎ ಪುಟ್ಬಾಲ್ ಮೈದಾನ ಸಭಾಂಗಣದಲ್ಲಿ ಅರ್ಥಪೂರ್ಣ ಆಚರಣೆಗೆ ಕ್ರಮ ವಹಿಸಲಾಗುವುದು ಎಂದರು. ಜಯಂತಿ ಕಾರ್ಯಕ್ರಮಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಹಾಗೂ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದರು.

ಜಯಂತಿ ಆಚರಣೆ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ, ಆಹ್ವಾನ ಪತ್ರಿಕೆ, ವಿಶೇಷ ಉಪನ್ಯಾಸ, ವಚನ ಗಾಯನ ಸೇರಿದಂತೆ ಎಲ್ಲವೂ ಸರಿಯಾಗಿ ನಿರ್ವಹಿಸಬೇಕು. ಅದೇ ರೀತಿ ವೇದಿಕೆ, ಕುಡಿಯುವ ನೀರು, ಧ್ವನಿವರ್ಧಕ, ಸ್ವಚ್ಛತೆ ಮತ್ತು ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡುವಂತೆಯೂ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಸಮುದಾಯದ ಮುಖಂಡರು, ಜನ ಪ್ರತಿನಿಧಿಗಳು ಜಯಂತಿಗಳ ಆಚರಣೆಯ ಕುರಿತು ತಮ್ಮ ಸಲಹೆ ನೀಡಿದರು.

ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆ ಬಹು ಮುಖ್ಯ

ಡೀನ್ ಡಾ. ಚಲುವರಾಜು ಹೇಳಿಕೆ । ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಪತ್ರಕರ್ತರ ಪಾತ್ರ ದೊಡ್ಡದು

ಹಂಪಿ ಟೈಮ್ಸ್ ಹೊಸಪೇಟೆ

ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತರಗತಿಗಳ ಒಳಗಿನ ಕಲಿಕೆಗಿಂತ ಪ್ರಾಯೋಗಿಕ ಕಲಿಕೆ ಬಹು ಮುಖ್ಯವಾಗಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಡೀನರಾದ ಡಾ. ಚಲುವರಾಜು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ನುಡಿಕಟ್ಟಡದಲ್ಲಿ ಬುಧವಾರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರೇಡಿಯೋ ಮತ್ತು ಟೆಲಿವಿಷನ್ ಕಾರ್ಯಕ್ರಮಗಳ ನಿರ್ಮಾಣ ಕುರಿತ ರಾಜ್ಯಮಟ್ಟದ ಮೂರು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಆಧುನಿಕ ತಂತ್ರಜ್ಞಾನದ ಮೂಲಕ ಪ್ರಾಯೋಗಿಕ ಕಲಿಕೆಯಲ್ಲಿ ಮುಂದಿದೆ. ನಮ್ಮ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಪ್ರಾಯೋಗಿಕ ಕಲಿಕೆಗೆ ಬಹುದೊಡ್ಡ ಪ್ರಯೋಗಾಲಯವಾಗಿದೆ. ಇಂದು ವಿಭಾಗವು ಹಮ್ಮಿಕೊಂಡಿರುವ ಈ ಕಾರ್ಯಾಗಾರವು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಮೊದಲ ಹೆಜ್ಜೆಯನ್ನಿರಿಸಿದೆ. ಇಂತಹ ಕಾರ್ಯಾಗಾರಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಲ್ಲಿ ಕಲಿಕೆಯ ಆಸಕ್ತಿ ಮತ್ತು ಸಕ್ರಿಯ ಭಾಗವಹಿಸುವಿಕೆ ಮುಖ್ಯ. ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಪತ್ರಕರ್ತರ ಪಾತ್ರ ದೊಡ್ಡದು. ಪತ್ರಕರ್ತ ಇಂದು ವರದಿಗಾರನಲ್ಲದೆ ಸಾಹಿತಿಯೂ, ವಿಮರ್ಶಕನು, ಸಂಶೋಧಕನು ಹಾಗೂ ವಿಜ್ಞಾನಿಯೂ ಆಗಿದ್ದಾನೆ. ಇಂದು ಪತ್ರಿಕಾರಂಗದಲ್ಲಿ ಭಾಷೆಯ ಕಲಿಕೆ ಹಾಗೂ ಭಾಷೆಯ ಪ್ರೌಢಿಮೆ ಅಗತ್ಯವಿದೆ ಇದಕ್ಕೆ ವಿದ್ಯಾರ್ಥಿಗಳು ಹೆಚ್ಚು ಒತ್ತು ನೀಡಬೇಕು. ಇದರ ಜೊತೆಗೆ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಕಡೆ ಮುಖ ಮಾಡಬೇಕು ಎಂದು ತಿಳಿಸಿದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಡಾ.ಎಸ್.ವೈ. ಸೋಮಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನವರೆಗೂ ಕನ್ನಡ ವಿಶ್ವವಿದ್ಯಾಲಯವು ಕನ್ನಡ ನಾಡು-ನುಡಿ, ಸಂಸ್ಕೃತಿ ಅಧ್ಯಯನ, ಅಧ್ಯಾಪನ, ಪ್ರಕಟಣೆಗೆ ಗುರಿ ಹೊಂದಿತ್ತು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವನ್ನು ಆರಂಭಿಸುವ ಮೂಲಕ ಪ್ರಚಾರ ಮತ್ತು ಪ್ರಸಾರ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಕರ್ನಾಟಕದಲ್ಲಿಯೇ ಸುಸಜ್ಜಿತವಾದ ಮತ್ತು ಅತ್ಯಾಧುನಿಕ ರೇಡಿಯೋ ಮತ್ತು ಟೆಲಿವಿಷನ್ ಕೇಂದ್ರವನ್ನು ಹೊಂದಿದ ವಿಶ್ವವಿದ್ಯಾಲಯ ನಮ್ಮದಾಗಿದೆ. ಇಂದು ನಮ್ಮ ವಿಭಾಗವು ಕನ್ನಡ ವಿಶ್ವವಿದ್ಯಾಲಯದ ಪ್ರಮುಖ ಕಾರ್ಯಕ್ರಮಗಳ ಜೊತೆಗೆ ವಿಶ್ವಪ್ರಸಿದ್ಧ ಹಂಪಿ ಉತ್ಸವದಲ್ಲಿಯೂ ಸಕ್ರಿಯವಾಗಿ ಭಾಗವಹಿಸಿ ತನ್ನ ಛಾಪು ಮೂಡಿಸಿದೆ ಎಂದರು.

ಕನ್ನಡ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಾಪಕರಾದ ಡಾ. ಲೋಕೇಶ್ ಎಸ್.ಕೆ. ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಈರಯ್ಯಾ ಬಿ ಚಿಕ್ಕಮಠ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ವಿಭಾಗದ ಅಧ್ಯಾಪಕರಾದ ಪದ್ಮಾವತಿ ಕೆ., ಛಾಯಾಗ್ರಾಹಕರಾದ ಅಭಿರೂಪ್ ಎಂ.ಟಿ, ಬಸವೇಶ್ವರ ಕಲಾ ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಅಧ್ಯಾಪಕರಾದ ಮಹಾಂತೇಶ ಪಿ ದೊಡವಾಡ, ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ಮಣಿಕಂಠ ಹಿರೇಮಠ ನಿರೂಪಿಸಿದರು. ಬಸವರಾಜ ಐ.ಪಿ. ಅವರು ಸ್ವಾಗತಿಸಿದರು. ಪ್ರವೀಣ ಕುಮಾರ್ ಕೆ ವಂದಿಸಿದರು.

ಸಮಾಜದಲ್ಲಿನ ಜನರ ಮನಸ್ಥಿತಿ ಬದಲಾಗಬೇಕಿದೆ

ಹಂಪಿ ಟಮ್ಸ್ ಹಗರಿಬೊಮ್ಮಹನಹಳ್ಳಿ

ಜನರ ಮನಸ್ಥಿತಿಗಳು ಬದಲಾಗದ ಹೊರತು, ನಮ್ಮ ದೇಶದ ಸಂವಿಧಾನದ ಆಶಯಗಳು ಈಡೇರಲು ಸಾಧ್ಯವಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಎಚ್.ಆಂಜನೇಯ ಉಲ್ಲಾಳ್ ಅಭಿಪ್ರಾಯ ಪಟ್ಟರು.

ತಾಲ್ಲೂಕಿನ ತಂಬ್ರಹಳ್ಳಿಯಲ್ಲಿ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ, ಸಂವಿಧಾನ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸಂವಿಧಾನ ರೂಪುಗೊಂಡು 75 ವರ್ಷಗಳು ತುಂಬಿದರೂ, ಸಂವಿಧಾನದ ಪ್ರಕಾರ ದೇಶದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಲಭಿಸುವುದು ಸೇರಿದಂತೆ ಪ್ರತಿಯೊಬ್ಬರಿಗೂ ಸಮಾನತೆ ಸಿಗಬೇಕಾಗಿತ್ತು, ಆದರೆ ಇಂದು ಸಂವಿಧಾನದ ಆಶಯಗಳು ಈಡೇರದಿರುವುದು ಬೇಸರದ ಸಂಗತಿಯಾಗಿದೆ ಎಂದರು.

ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ್,ಪಾರಸಿಕರಿಗೆ ಸೇರಿದಂತೆ ಎಲ್ಲರಿಗೂ ಅವರದೇ ಆದ ಧರ್ಮ ಗ್ರಂಥಗಳು ಇದೆಯಾದರೂ ಅವರೆಲ್ಲರೂ ಭಾರತೀಯರು, ಪ್ರತಿಯೊಬ್ಬ ಭಾರತೀಯನಿಗೂ ಒಂದೇ ಗ್ರಂಥ ಅದುವೇ ಡಾ.ಬಿ.ಅಂಬೇಡ್ಕರ್ ರವರು ರಚಿಸಿದ ಭಾರತದ ಸಂವಿಧಾನವಾಗಿದೆ. ಆ ಸಂವಿಧಾನದ ಆಶಯಗಳು ಈಡೇರಬೇಕಾದರೇ ಎಲ್ಲರೂ ಒಂದೇ ಎನ್ನುವ ಭಾವನೆ ಬರಬೇಕೆಂದರು.

ಕೆ.ಪಿ.ಜಿ. ಪ್ರೌಢಶಾಲಾ ಶಿಕ್ಷಕ ಎಂ.ಎಸ್. ಕಲ್ಗುಡಿ ಸಂವಿಧಾನದ ಕುರಿತು ಉಪನ್ಯಾಸ ನೀಡಿದರು. ಸಂವಿಧಾನದ ಕುರಿತಂತೆ ನಡೆಸಿದ ಪ್ರಬಂಧ, ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿದ ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ನ ವಿತರಿಸಿ ಗೌರವಿಸಲಾಯಿತು. ಭಾರತೀಯ ಸ್ಟೇಟ್ ಬ್ಯಾಂಕ್ ನಿಲ್ದಾಣದಿಂದ ಪ್ರಾರಂಭವಾದ ಜಾಗೃತಿ ಜಾಥಾಕ್ಕೆ ಗ್ರಾ.ಪಂ.ಅಧ್ಯಕ್ಷೆ ಪೂರ್ಣಿಮಾ ಏಣಿಗಿ ಹನುಮೇಶ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಚಾಲನೆ ನೀಡಿದರು.

ತಹಸೀಲ್ದಾರ್ ಚಂದ್ರಶೇಖರ ಶಂಬಣ್ಣ ಗಾಳಿ, ಜಿ.ಪಂ.ಮಾಜಿ ಸದಸ್ಯ ಅಕ್ಕಿ ತೋಟೇಶ್, ಉಪಾಧ್ಯಕ್ಷೆ ಎಂ.ಬಸಮ್ಮ, ಸಂಡೂರು ಹುಸೇನ್ ಭಾಷ, ಆನೇಕಲ್ ದೊಡ್ಡಬಸಪ್ಪ, ಎಚ್.ದೊಡ್ಡ ಬಸಪ್ಪ, ಸಿ.ಪ್ರತಿಭಾ, ಬಣಕಾರ್ ಬಸಮ್ಮ, ಉಪ ತಹಸೀಲ್ದಾರ್ ಶಿಲ್ಪಾ ಮೇಟಿ, ಮುಖ್ಯಶಿಕ್ಷಕ ಕೆ.ವಿ.ಲೋಕೇಶ್, ರೇಣುಕಮ್ಮ, ರೆಡ್ಡಿನಾಯ್ಕ್, ಮಾರುತೇಶ್, ಜಯಸೂರ್ಯಗೌಡ, ನಿವೃತ್ತ ಇ.ಒ. ಟಿ. ವೆಂಕೋಬಪ್ಪ, ಕಾಳಿ ಬಸವರಾಜ್, ಪಿ.ಡಿ.ಓ. ಕೃಷ್ಣ ಮೂರ್ತಿ,ಪಿ. ಎಸ್.ಐ..ಸುವರ್ಧಾ, ಪಂಚಾಯತ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇರರಿದ್ದರು.

ಪಂಚಮಸಾಲಿ ಯುವ ಘಟಕದ ತಾಲೂಕ ಅಧ್ಯಕ್ಷರಾಗಿ ಸಂತೋಷ್ ಆಯ್ಕೆ

ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ: ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ತಾಲೂಕು ಯುವ ಘಟಕದ ಅಧ್ಯಕ್ಷರಾಗಿ ಎಸ್.ಎ. ಸಂತೋಷ. ಯುವ ಘಟಕದ ನಗರ ಅಧ್ಯಕ್ಷರಾಗಿ ಪ್ರತಿಕ್ಷಿತ್ ಗೌಡ ಆಯ್ಕೆಯಾಗಿದ್ದಾರೆ. ಇತ್ತೀಚಿಗೆ ಪಟ್ಟಣದ ಹರ ದೇಗುಲದಲ್ಲಿ ನಡೆದ ಸಮುದಾಯದ ಯುವ ಸಮೂಹದ ಸಭೆಯಲ್ಲಿ, ಸಂಘದ ಗೌರವಾಧ್ಯಕ್ಷರು ಹಾಗೂ ಹಿರಿಯರಾದ ಬಾವಿ ಬೆಟ್ಟಪ್ಪನವರ ನೇತೃತ್ವದಲ್ಲಿ ಅವಿರೋಧವಾಗಿ ಆಯ್ಕೆಮಾಡಲಾಯಿತು. ಯುವ ಘಟಕದ ತಾಲೂಕು ಕಾರ್ಯದರ್ಶಿ ಯುವರಾಜ್ ಗಡ್ಡಿ, ನಗರದ ಕಾರ್ಯದರ್ಶಿ ಕೊಬ್ಬಜ್ಜಿ ಕೊಟ್ರೇಶ್ ಆಯ್ಕೆಯಾದರು.

ಹಿರಿಯರಾದ ಬಾವಿ ಬೆಟ್ಟಪ್ಪ ಮಾತನಾಡಿ, ಸಮುದಾಯದ ಹಿರಿಯರು ಮತ್ತು ಕಿರಿಯರ ಸಲಹೆ, ವಿಶ್ವಾಸವನ್ನು ಪಡೆಯುವ ಮೂಲಕ ಸಮುದಾಯವನ್ನು ಸಂಘಟಿಸಬೇಕು ಎಂದರು. ಇದಲ್ಲದೆ ಎಲ್ಲಾ ಸಮುದಾಯಗಳ ಯುವಕರ ಒಡನಾಟವನ್ನು ಚನ್ನಾಗಿ ಹೊಂದಬೇಕು ಎಂದು ಸಲಹೆ ನೀಡಿದರು.

ಮಂಜುನಾಥಗೌಡ, ಸಂಚಿ ಶಿವಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕಿಚಿಡಿ ಕೊಟ್ರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೊನ್ನದ್ ಗುರುಬಸವರಾಜ್ ಸೇರಿದಂತೆ ಗ್ರಾಮೀಣ ಯುವಕರು ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್ ದಿನ ಪತ್ರಿಕೆಗಾಗಿ ನಿಮ್ಮ ಸಮೀಪದ ಪತ್ರಿಕಾ ಏಜೆಂಟರನ್ನು ಸಂಪರ್ಕಿಸಿರಿ
ಮಾಹಿತಿಗಾಗಿ: 9448633038

ಸಂವಿಧಾನ ಅರಿತರೆ ಸರ್ವರ ಅಭಿವೃದ್ಧಿ

ಹಂಪಿ ಟೈಮ್ಸ್ ಬಳ್ಳಾರಿ

ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರೈಸಿದ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ನಿರ್ದೇಶನದಂತೆ, ಸಂವಿಧಾನ ಜಾಗೃತಿ ಜಾಥಾವು ಜಿಲ್ಲೆಯಾದ್ಯಂತ ನಡೆಯುತ್ತಿದ್ದು, ಇದರ ಅಂಗವಾಗಿ ಮಂಗಳವಾರದಂದು ಸಿರುಗುಪ್ಪ ತಾಲ್ಲೂಕಿನ ಬಲಕುಂದಿ, ಹಳೇಕೋಟೆ ಗ್ರಾಮಗಳ ಗ್ರಾಮ ಪಂಚಾಯಿತಿಗಳ ಮಾರ್ಗದಲ್ಲಿ ಮತ್ತು ಕೊನೆಯಲ್ಲಿ ಸಿರುಗುಪ್ಪ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಸಂಚರಿಸಿ ಸಂಭ್ರಮದ ವಾತಾವರಣ ಮನೆಮಾಡಿತು.

ಜಾಥಾವನ್ನು ಪ್ರತೀ ಗ್ರಾಮ ಪಂಚಾಯಿತಿಗಳಲ್ಲಿಯೂ ಕಳಶ, ಪೂರ್ಣ ಕುಂಭ ಹೊತ್ತ ಮಹಿಳೆಯರು, ವಿವಿಧ ಸಾಂಸ್ಕೃತಿಕ ಕಲಾವಿದರು, ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಗ್ರಾಮದ ಜನಪ್ರತಿನಿಧಿಗಳು, ಊರಿನ ಮುಖಂಡರು ಹಾಗೂ ಸಾರ್ವಜನಿಕರು ಅದ್ದೂರಿಯಾಗಿ ಸ್ವಾಗತಿಸಿದರು.

ಸಿರುಗುಪ್ಪ ಪಟ್ಟಣದ ಮುಖ್ಯ ರಸ್ತೆಯಲ್ಲಿ ನಿರಂತರ ಒಂದು ಕಿಲೋಮೀಟರ್ ಉದ್ದಕ್ಕೂ ಜನಗಳಿಂದ ಕೂಡಿದ ಸಂವಿಧಾನದ ಜಾಗೃತಿ ಜಾಥಾದ ಮೆರವಣಿಗೆಯಲ್ಲಿ ಎಲ್ಲಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ತಹಶೀಲ್ದಾರರು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಮುಖಂಡರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಹಳೇಕೋಟೆ ಗ್ರಾಮದಲ್ಲಿ ಗ್ರಾಮಸ್ಥ ನಂದೀಶ ಅವರು ಮಾತನಾಡಿ, ಪ್ರತಿಯೊಬ್ಬರೂ ಸಂವಿಧಾನದ ಬಗ್ಗೆ ಅರಿಯಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದ ಸಂವಿಧಾನವು ಸರ್ವರ ಅಭಿವೃದ್ಧಿಯನ್ನು ಒಳಗೊಂಡಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಹಳೇಕೋಟೆ ಗ್ರಾಮದ ಶಿಕ್ಷಕ ದುರ್ಗಪ್ಪ ಅವರು ಮಾತನಾಡಿ, ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ವ್ಯಕ್ತಿ ಗೌರವ, ಸಮಾನತೆ, ಸ್ವಾತಂತ್ರ್ಯ, ನೀಡಿದೆ. ಆದ್ದರಿಂದ ಸಂವಿಧಾನವನ್ನು ಎಲ್ಲರೂ ಗೌರವಿಸಬೇಕು ಎಂದು ಕರೆ ನೀಡಿದರು.

ಜಾಥಾದುದ್ದಕ್ಕೂ ಸಂವಿಧಾನದ ಆಶಯ ಮತ್ತು ಮೌಲ್ಯಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಸಂವಿಧಾನ ರಚನಾ ಸಭೆ ಹಾಗೂ ಸಂವಿಧಾನದ ಕುರಿತ ವೀಡಿಯೋ ತುಣುಕುಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಯಿತು. ಸಂವಿಧಾನ ಪ್ರಸ್ತಾವನೆಯ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿ ಜಾಥಾದ ಉದ್ದಕ್ಕೂ ಸಂವಿಧಾನ ಪ್ರಸ್ತಾವನೆಯ ಪ್ರತಿಗಳನ್ನು ಹಂಚಿಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಸಿರುಗುಪ್ಪ ತಹಶೀಲ್ದಾರ ವಿಶ್ವನಾಥ, ತಾಲ್ಲೂಕು ಪಂಚಾಯಿತಿಂ ಕಾರ್ಯ ನಿರ್ವಾಹಕಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ವರ್ಗದವರು, ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಿವಿಧ ಇಲಾಖೆಗಳ ಸಿಬ್ಬಂದಿ ವರ್ಗದವರು, ಗ್ರಾಮ ಪಂಚಾಯಿತಿಗಳ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

With All Your Support Hampi Times Daily E-Paper Now has 40,000+ Readers, Thank You
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
ನಿಮ್ಮ ಹಂಪಿ ಪ್ರವಾಸ ಅನುಭವ
ನೀವು ಹಂಪಿಗೆ ಭೇಟಿ ನೀಡಿದ್ದೀರಾ?
ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ,
ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?
ನಿಮ್ಮದೆ ಅಭಿಪ್ರಾಯಗಳನ್ನು 200 ಪದಗಳಲ್ಲಿ ಬರೆದು ಕಳುಹಿಸಿ,
ಹಂಪಿ ಟೈಮ್ಸ್ ಮೂಲಕ ಅಧಿಕಾರಿಗಳ ಗಮನ ಸೆಳೆಯಿರಿ.
ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.
www.hamp